೮ ಪುಟ ಕಾಲಾಣ್ಮೆ

Registered No. M 1393.

ಕಂಠೀರವ

KANTEERAVA

KANARESE, BI-WEEKLY

ESTD. 1919 ಸ್ಥಾಪನೆ

ಸಂಪುಟ ೨೨ | ಮಂಗಳೂರು, ೧೯೪೦ನೇ ಇಸವಿ ಜುಲೈ ತಾರೀಕು ೨೬ನೇ ಶುಕ್ರವಾರ | ಸಂಚಿಕೆ ೩೪

VOL. XXII | MANGALORE, FRIDAY, JULY 26, 1940 | NO. 34

ಫ್ರಾನ್ಸಿನ ಹೊಸ ಅವತಾರ

ಫ್ರಾನ್ಸಿನ ಹೊಸ ರಾಜ್ಯಘಟನೆಯ ಹಿಂದು ಗಡೆಯಲ್ಲಿರುವ ಅಭಿಪ್ರಾಯವೇನು? ಆ ದೇಶದ ಹೊಸ ಯಜಮಾನರುಗಳ ಪ್ರೀತಿ ಸಂಪಾದನೆಯೇ? ಅಥವಾ ನಿಜವಾಗಿಯೂ ಮಾರ್ಶಲ್ ಪಿಟೆನರೂ, ಮತ್ತವರ ಸೇನಾ ಶಾಖೆಯ ಸಹೋದ್ಯೋಗಿಗಳೂ ಸಮಾಜದ ಜೀರ್ಣೋದ್ಧಾರದ ವಿಷಯದಲ್ಲಿ ತಕ್ಕ ಆಸಕ್ತಿ ವಹಿಸಿರುವರೇ? ಹಲವು ಬಾರಿ, ಮಂದಿ ಒಂದಕ್ಕಿಂತ ಹೆಚ್ಚು ಉದ್ದೇಶಗಳನ್ನಿಟ್ಟುಕೊಂಡು ವರ್ತಿಸುವ ಹಾಗೆ ಪಿಟೆನ್‌ರಾದರೂ, ಹಲವು ಉದ್ದೇಶಗಳನ್ನು ದೃಷ್ಟಿಯಲ್ಲಿ ಇರಿಸಿಕೊಂಡೇ ಕೆಲಸಮಾಡುತ್ತಿರುವರೆಂದು, ಈ ಸಂದರ್ಭದಲ್ಲಿ ಊಹಿಸುವುದು ತಪ್ಪಾಗದೆನ್ನಿ!

ಪಿಟೆನ್‌ರು ಹಿಟ್ಲರರ ಸೂಚನೆಯ ಮೇರೆಗೆ ನಡೆಯುತ್ತಿರುವರೆಂಬುದೇನೋ ನಿಜವಾಗಿರಬಹುದು; ಹಾಗೇ ಫ್ರಾನ್ಸಿನ ಸಾಮಾಜಿಕ ಜೀವನದ ಸುಧಾರಣೆಯಾದರೂ ಆಗಲೇಬೇಕೆಂದು ಅವರು ವರ್ತಿಸುತ್ತಲೂ ಇರಬಹುದು. ಅದು ಹೇಗಿದ್ದರೂ ಸೂಚಿಸಲಾದ ಹೊಸ ಬದಲಾವಣೆಗಳ ವಿಚಾರದಲ್ಲಿ ಅಲ್ಲಿನ ಜನರ ಅಭಿಪ್ರಾಯವೇನೆಂದು ಇನ್ನು ತಿಳಿಯಬೇಕಾಗಿದೆ.

ಫ್ರಾನ್ಸಿನ ಇಂದಿನ ಹೊಸ ರಾಜ್ಯಘಟನೆಯು ಮಹತ್ತರವಾದ ಬದಲಾವಣೆಗಳನ್ನು ಒಳಗೊಂಡಿದೆ. ಈ ರಾಜ್ಯಘಟನೆಯ ಸೂತ್ರಗಳ ಮೇರೆಗೆ, ಪಿಟೆನ್‌ರಿಗೆ ಅತ್ಯಂತ ವಿಶಾಲವಾದ ಅಧಿಕಾರ ದೊರಕಿದೆ. ಪ್ರಧಾನರೂ ಪಿಟೆನರೇ; ಫ್ರಾನ್ಸಿನ ಪ್ರೆಸಿಡೆಂಟರೂ ಅವರೇಯಾಗಿ ಈ ಎರಡು ಕಾರ್ಯಭಾರಗಳೂ ಒಬ್ಬರಲ್ಲೇ ನೆಲಸಿದೆ; ಅವರಿಗೆ "ಫ್ರೆಂಚ್ ಸಂಸ್ಥಾನದ ನಾಯಕ"ರೆಂಬ ಈ ಬಿರುದು ಕೂಡ ಕೊಡಲ್ಪಟ್ಟಿದೆ. ಈ ಅಧಿಕಾರ ನಿರ್ವಾಹದಲ್ಲಿ, ಪಿಟೆನ್‌ರು ಹಿಟ್ಲರನನ್ನೇ ಭಕ್ತಿಪುರಸ್ಸರವಾಗಿ ಅನುಕರಿಸಿದ್ದಾರೆ. ಹಿಟ್ಲರನಂತೆ, ಅವರೂ ಫ್ರೆಂಚ್ ಸೇನೆಯ ಸರ್ವಸೇನಾಪತಿಗಳಾಗಿದ್ದಾರೆ. ಹೀಗಾಗಿ, ಫ್ರಾನ್ಸ್ ಈಗ ಒಂದನೇ ತರಗತಿಯ ಫೆಶಿಸ್ಟ್ ಅಥವಾ ನಾಜಿ ಸಂಸ್ಥಾನವಾಗಿ ಪರಿಣಮಿಸಿದೆ. ಫ್ರಾನ್ಸಿನ ಸೆನೆಟೂ, ಪ್ರಜಾಪ್ರತಿನಿಧಿ ಸಭೆಯೂ ಜರ್ಮನ್ ರೀಚ್‌ಸ್ಟಾಗಿನ ರೀತಿಯಲ್ಲಿ ವಿಸರ್ಜಿಸಲ್ಪಟ್ಟು, ಇಟೆಲಿಯ ಮಾದರಿಯಲ್ಲಿ, ಹೊಸ ಪ್ರಜಾಪ್ರತಿನಿಧಿಗಳ ಸಭೆ ಏರ್ಪಡುವ ವರೆಗೆ, "ಸಂಸ್ಥಾನದ ನಾಯಕ"ರಾದ ಮಾರ್ಶಲ್ ಪಿಟೆನ್‌ರೇ, ಸರ್ವ ನ್ಯಾಯ ವಿಧಾಯಕ ಅಧಿಕಾರವನ್ನೂ ಚಲಾಯಿಸುವರು. ಅಂತೂ, ಇಟೆಲಿ—ಜರ್ಮನಿಗಳೆರಡೇ ಫ್ರಾನ್ಸಿನ ಈ ಹೊಸ ಫ್ಯುರಾರರಿಗೆ, ತಾವು ಅನುಕರಿಸಬೇಕಾಗಿ ಬಂದ ಎರಡು ಆದರ್ಶ ಪ್ರಪಂಚಗಳಾಗಿ ತೋರಿಬಂದು, ಅವೆರಡರ ರಾಜ್ಯಭಾರ ಪದ್ಧತಿಯೇ ಇವರಿಗೂ ಮಾನ್ಯವಾಗಿವೆ!

ಫ್ರಾನ್ಸಿನಲ್ಲಿ ಹೀಗೆ ರಾಜ್ಯರಚನೆಯಲ್ಲಿ ಸಂಪೂರ್ಣವಾಗಿ ಮಹತ್ವದ ಬದಲಾವಣೆಗಳುಂಟಾಗಲಿವೆ ಎನ್ನುವಾಗ, ಫ್ರಾನ್ಸಿನ ಹಳೆಯ ಪ್ರಸಿದ್ಧ ಧ್ಯೇಯವಾದ "ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುಭಾವ"ಗಳನ್ನು ಕೆರೆದು ಹಾಕಲು ನೋಡುವಲ್ಲಿ ಏನೂ ಆಶ್ಚರ್ಯವಿಲ್ಲ.

ಫ್ರಾನ್ಸಿನ ಇಂದಿನ ಹೊಸ ಧ್ಯೇಯವು, ಫ್ರಾನ್ಸಿನ ಜನತೆಯ ಆವಶ್ಯಕತೆಗಳನ್ನು ಮೊದಲಿಗಿಂತಲೂ ಹೆಚ್ಚಾಗಿ ಪೂರೈಸುವುದಾಗಿದೆ ಎಂದು ಊಹಿಸಲ್ಪಟ್ಟಿದೆ ಫ್ರಾನ್ಸಿನ ಜನರು ಇಂದು "ಶ್ರಮಜೀವನ, ಕುಟುಂಬ ಹಾಗೂ ದೇಶ"ಗಳ ಧ್ವಜದ ಅಡಿಯಲ್ಲಿ ಕಾದಾಡುತ್ತ ಬಾಳಿ ಬದುಕಬೇಕಾಗಿದೆ. ಇದನ್ನು ತೂಗಿ ನೋಡಿದಲ್ಲಿ, ಫ್ರೆಂಚರಲ್ಲದವರಿಗೂ ಇದರ ಪರಿಣಾಮವೇನೆಂದು ಹೊಳೆಯದಿರದಾಗಿದೆ. ಈ ಹೊಸ ಧ್ಯೇಯದ ಮಾರ್ಮಿಕವಾದ ಅರ್ಥವೇನು? "ಶ್ರಮಜೀವನ" ವೆಂಬುದು ಏತರ ಬದಲಿಗೆ ನಿಂತಿದೆ? ಜರ್ಮನಿಯಲ್ಲಿ ಕಾರ್ಖಾನೆಗಳ ಮಾಲಕರೂ, ಕೆಲಸಗಾರರೂ ಆ ಸರಕಾರದ ವಶವಿದ್ದು, ಆ ಕೆಲಸಗಾರರ ಶ್ರಮಜೀವನದಿಂದಲೂ, ಮಾಲಕರ ಮೂಲಧನದಿಂದಲೂ ಸರಕಾರವು ಪರಮಾವಧಿ ಪ್ರಯೋಜನ ಪಡೆಯುತ್ತಲಿದೆ; ಮತ್ತೀ ಪದ್ಧತಿಗೆ ಜರ್ಮನಿಯಲ್ಲಿ "ನ್ಯಾಶನಲ್ ಸೋಶಿಯಲಿಜಂ" ಎಂಬ ಹೆಸರೂ ಇದೆ. ಈಗ ಫ್ರಾನ್ಸಿನ ಈ "ಶ್ರಮಜೀವನ"ವು ಆ ಸೋಶಿಯಲಿಜಂನ ಮರಿಯಾಗಿರಬಹುದೇ? ಅಥವಾ ಒಂದೇ ಪದ್ಧತಿಯ ಎರಡು ಬೇರೆ ಬೇರೆ ಹೆಸರುಗಳಾಗಿರಬಹುದೇ?

ಅಥವಾ ಫ್ರಾನ್ಸಿನ ಈ ಹೊಸ ಪಲ್ಲವಿ "ಕಮ್ಯುನಿಸ್ಟ"ರನ್ನು ದೂರವಿರಿಸಲೂ ಆಗಿರಬಹುದೇ? ಫ್ರಾನ್ಸಿನ ಹಲವು ಸರಕಾರಗಳು "ಕಮ್ಯುನಿಸಂ"ನ್ನು ಮುರಿದುಬಿಡಲು ಭಗೀರಥ ಪ್ರಯತ್ನಗಳನ್ನೇ ಮಾಡಿದ್ದರೂ, ಕಮ್ಯುನಿಸ್ಟರನ್ನು ಅಲ್ಲಿ ಅಡಗಿಸಲಾಗಲಿಲ್ಲ; ಅವರಲ್ಲಿ ತಲೆ ಎತ್ತಿ ಕೊಂಡೇ ಇದ್ದರು. ಇದೇ ಯುದ್ಧದ ಆರಂಭ ಕಾಲದಲ್ಲಿ ಫ್ರಾನ್ಸಿನ ಸರಕಾರವು, ಹಲವು ಮಂದಿ ಸಭಾ ಸದಸ್ಯರು ಕೂಡ, ಹಲವು ಮಂದಿ "ಕಮ್ಯುನಿಸ್ಟರ"ನ್ನು ಕೈದುಮಾಡಿ ಸೆರೆಯಲ್ಲಿ ಇರಿಸಿದ್ದಿತು. ಮಾರ್ಶಲ್ ಪಿಟೆನ್‌ರವರು, ತಮ್ಮ ಹೊಸ ಯಜಮಾನರಾದ ಹಿಟ್ಲರ್ ಮುಸಲೋನಿ

[ಪುಟ ೮ ನೋಡಿ]



ಆಧುನಿಕ ಅಶ್ವಸೇನೆ

ಮುನ್ನಡೆಯಲು ಸಿದ್ಧವಾಗಿರುವಲ್ಲಿ ಅದೊಮ್ಮೆ ನಿಂತಿದ್ದ ಬ್ರಿಟಿಷ್ ಟ್ಯಾಂಕುಗಳ ಸೇನೆಯ ಚಿತ್ರ. ಇವು ಹಗುರವಾಗಿದ್ದು ಅಸಾಧ್ಯವೆಂದು ತೋರುವ ದಾರಿಯನ್ನು ಸಾಗಿ ಸಾಧಿಸತೋರಬಲ್ಲವುಗಳು!

ಸುಖವೆ?

ನಾನು ಹಾಗೇ ಅನ್ನುವೆನು—

ಗ್ಲಾಕ್ಸೋ

ವಿಗೆ ಉಪಕಾರ

Glaxo

ರಾಜಾ ಸ್ನೋ

ಅಂದಕ್ಕಾಗಿ

ಮಣ್ಯಂ ಅಂಡ್ ಕೋ.,

ಮದರಾಸು ಮತ್ತು ಬೆಂಗಳೂರು

ದಾಂಯವಾದಿ ಮತ್ಸರ, ಯಜಮಾನಿಕೆ ಕಾಳಗ, ಸಂಸಾರದ ಸಮರ—

ಇವು ಅಳಿಯಬೇಕಾದರೆ ಅಹಿಂಸೆಯನ್ನೇ ಅಭ್ಯಾಸಿಸಿ

ಆಗ ಕೋರ್ಟು ಬೇಡ
ಕಚೇರಿ ಬೇಡ

ಆಸ್ತಿ ಮನೆ ಉಳಿದೀತು
ಬಡತನ ಅಳಿದೀತು

ಮಹಾತ್ಮರ ಹೇಳಿಕೆ.

"ಅಹಿಂಸೆಯನ್ನು ಹೇಗೆ ಪ್ರಯೋಗಿಸಬಹುದೆಂದು ತಿಳಿಸುತ್ತಾ, ಮೂರು ವಿಧಾನಗಳನ್ನು ಅರುಹಿದ್ದೇನೆ. ಇದೀಗ ಮುಖ್ಯವಾದ ನಾಲ್ಕನೆಯ ವಿಭಾಗವನ್ನು ತಿಳಿಸುತ್ತೇನೆ. ಅಹಿಂಸೆಯ ಪ್ರಯೋಗಕ್ಕೆ ಇದು ಅತ್ಯುತ್ತಮ ಪ್ರದೇಶ. ಇದೇ ಸಂಸಾರದ ಪ್ರದೇಶ. ಸಂಸ್ಥೆಗಳ ಸಕಲ ಸದಸ್ಯರೂ, ತಾವು ಒಂದು ಕುಟುಂಬದ ವಿವಿಧ ಸದಸ್ಯರೆಂದು ತಿಳಿದುಕೊಂಡರೆ, ಆಗ ಅಹಿಂಸೆಯ ಪ್ರಯೋಗ ಸುಲಭಸಾಧ್ಯವಾಗುವುದು. ಕುಟುಂಬದ ಸದಸ್ಯರೊಳಗಣ ಅಹಿಂಸೆಯ ಉಪಯೋಗವೂ ಸರಿಯಾಗುವುದು. ಇದರಲ್ಲಿ ನಾವು ಕೃತಕೃತ್ಯರಾಗದಿದ್ದರೆ, ನಮ್ಮ ಕುಟುಂಬದ ಸದಸ್ಯರಲ್ಲಿ, ಸಂಬಂಧಿಕರಲ್ಲಿ, ಸ್ನೇಹಿತರಲ್ಲಿ ಇದನ್ನು ಪ್ರಯೋಗಿಸಲಾರದಾದರೆ ನಾವು ಇದಿರಿಸುವುದು ಹೇಗೆ?

"ಕುಟುಂಬದ ವಿಚಾರದಲ್ಲಿ ಅಹಿಂಸೆಯನ್ನು ಪ್ರಯೋಗಿಸಲು ಸಾಧ್ಯವಾಗದಿದ್ದರೂ, ರಾಜಕೀಯ ವಿಚಾರದಲ್ಲಿ ಸಾಧ್ಯವಿದೆ ಎಂದು ನಾವು ಗ್ರಹಿಸಬಹುದು. ಈ ಗ್ರಹಿಕೆ ತಪ್ಪು. ಅಹಿಂಸೆಯು ಅಭ್ಯಾಸದ ಪರಿಣಾಮವಾಗಿ ಬರಬೇಕಾಗಿದೆ. ಆಗ ಮಾತ್ರ ಅದು ಉಪಯೋಗಕ್ಕೆ ಸಿಲುಕಬಹುದು. ಇಲ್ಲವಾದರೆ, ಒಂದೆಡೆ ಅಪ್ರಯೋಜಕವಾದುದು, ಇನ್ನೊಂದೆಡೆ ಪ್ರಯೋಜನಕಾರಿಯೂ ಹೇಗಾದೀತು? ಅಹಿಂಸೆಯ ಮೊದಲ ಅಕ್ಷರ ಮನೆಯಲ್ಲೇ ಕಲಿಯಲ್ಪಡಬೇಕು. ಅಹಿಂಸೆಯನ್ನು ಕಲಿತ ವ್ಯಕ್ತಿಗೆ, ಇಡೀ ಜಗತ್ತೇ ಒಂದು ಕುಟುಂಬ. ಆತನು ಅದಾರಿಗೂ ಹೆದರ; ಅದಾರೂ ಅವನಿಗೆ ಹೆದರರು.

"ಈ ರೀತಿಯ ತರಬೇತಿ ಪಡೆಯಬಹುದಾದವರು ಅತ್ಯಲ್ಪ ಸಂಖ್ಯೆ ಎಂದು ಹೇಳಬಹುದು. ಅದು ಸಾಧ್ಯವಿದ್ದುದೇ. ಆದರೆ ಅದು ನನ್ನ ಹೇಳಿಕೆಗೆ ಉತ್ತರವಲ್ಲ. ಇದನ್ನು ವಿರೋಧಿಸುವವರು, ಅದಕ್ಕೂ ಒಪ್ಪದಿದ್ದರೆ ಅಂತಹರು ನಂಬಿಗೆ ಇಡಬೇಕಾಗಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು, ಈ ವಿಚಾರದಲ್ಲಿ ತನ್ನ ಅಭಿಪ್ರಾಯವನ್ನು ಸರಿಯಾಗಿ ತಿಳಿಸಿದೆ. ಅಹಿಂಸೆಯ ಸೇನೆ, ಅದೆಷ್ಟು ಚಿಕ್ಕದಾಗಿದ್ದರೂ ಒಂದು ದಿನ ಬೆಳೆಯದಿರದು. ಸಂಪೂರ್ಣ ಅಹಿಂಸಾತ್ಮಕರಲ್ಲದವರ ಆದೆಂತಹ ಸೇನೆಯಾದರೂ, ಹೆಚ್ಚಿನ ಪ್ರಯೋಜನ ಒದಗಿಸದು.

"ಇದರಿಂದ ತಮ್ಮ ಜೀವನವನ್ನು ಅಹಿಂಸೆಯ ಅಚ್ಚಿಗೆ ಹೊಂದಿಸಿ ಜೀವಿಸಬಲ್ಲವರಷ್ಟೇ ಅಹಿಂಸಾವಾದಿ ಸೈನಿಕರಾಗಬಹುದು — ಎಂದು ತಿಳಿಯದಿರಿ. ಅದನ್ನು ಪ್ರಯತ್ನಿಸಲು, ತನ್ನಿಂದಾದ ಎಲ್ಲಾ ಯತ್ನಗಳನ್ನೂ ನಡೆಸುವವನಿಗೂ ಅಧಿಕಾರವಿದೆ. ಸಂಪೂರ್ಣ ಅಹಿಂಸಾತ್ಮಕರಾದವರ ಸೇನೆ ಎಂದಿಗೂ ಇರಲಾರದು. ಆದರೆ ಅದಕ್ಕಾಗಿ ಯತ್ನಿಸುವನರಿಂದ ಅಂತಹದನ್ನು ತಯಾರಿಸಲು ಸಾಧ್ಯವಿದೆ. ಕಳೆದ ೫೦ ವರ್ಷಗಳಿಂದ ನಾನು ಸಂಪೂರ್ಣವಾಗಿ ಅಹಿಂಸಾತ್ಮಕನಾಗಿ, ತನ್ಮೂಲಕ ಮುಂದಿಗೆ ಆದರ್ಶನಾಗಲು ಯತ್ನಿಸಿ ಸಾಮಾನ್ಯವಾಗಿ ಕೃತಕೃತ್ಯನಾಗಿದ್ದೇನೆ. ನಮ್ಮ ಸುತ್ತಲೂ ಬೆಳೆಯುತ್ತಿರುವ ಕಗ್ಗತ್ತಲೆ ನನ್ನ ನಂಬುಗೆಯನ್ನು ಹೆಚ್ಚು ಹೆಚ್ಚಾಗಿ ಬೆಳೆಸುತ್ತಿದೆ. ಅಹಿಂಸೆಯ ಪ್ರಯೋಜನ ಹೆಚ್ಚಾಗಿ ಕಾಣುತ್ತಿದೆ."

ಯುರೋಪಿಗೆ ಜರ್ಮನಿಯ ನೀತಿ

ಯುರೋಪಿನಲ್ಲಿ ಹೊಸ ನೀತಿ-ರೀತಿಗಳನ್ನು ಸ್ಥಾಪಿಸುವ ಜರ್ಮನಿಯ ಘನ ಉದ್ದೇಶದ ವಿಚಾರವಾಗಿ, ರುಮೇನಿಯದ ಜರ್ಮನ್ ಪತ್ರಿಕೆಯು ಹೇಳಿದ ಅಭಿಪ್ರಾಯವನ್ನು ಲಂಡನಿನ "ಟೈಮ್ಸ್" ಪತ್ರಿಕೆ ಇದೀಗ [illegible] ಮಾಡಿದೆ.

"ಹೊಸ ಯೋಜನೆಯಲ್ಲಿ, ರಾಷ್ಟ್ರಗಳು ತಾವಾಗಿ ತಮಗೆ ಬೇಕಾದ ಸ್ಥಾನವನ್ನು ಪಡೆಯುವುದು ಸಾಧ್ಯವಿಲ್ಲ. ಬದಲು ಕೊಟ್ಟುದನ್ನು ಕೊಂಡು, ಸುಮ್ಮನಿರಬೇಕು. ಆಗ್ನೇಯ ದಿಕ್ಕಿನಲ್ಲಿ ಶಾಂತಿ ಸ್ಥಾಪಿಸಬೇಕೆನ್ನುವ ಜರ್ಮನಿಯ ಆಕಾಂಕ್ಷೆ, ಮಹತ್ವದ್ದಾದುದರಿಂದ, ವಿವಿಧ ರಾಷ್ಟ್ರಗಳು ಬಲಿದಾನಕ್ಕೆ ಸಿದ್ಧರಾಗಿದ್ದರೇನೆ ಶಾಂತಿ ನಡೆದೀತು."

"ಈ ಲೇಖನವನ್ನು ಕಂಡು "ಟೇಬ್ಲೆಟ್" ಎಂಬ ಪತ್ರಿಕೆಯು ತನ್ನ ಅಭಿಪ್ರಾಯವನ್ನು ಈ ರೀತಿ ಕೊಟ್ಟಿದೆ. "ಜರ್ಮನಿಯ ಕೈಗಾರಿಕೆಯನ್ನು ಬಲಪಡಿಸಲು ಸಾಧ್ಯವಿದ್ದಷ್ಟು ಯುರೋಪಿಯಾನರನ್ನು, ಜರ್ಮನ್ ಸರಕಾರದ ಅಂಕೆಯಲ್ಲಿ, ಸುತ್ತಲೂ ಹೇರಿಕೊಳ್ಳಲು ಯೋಚಿಸಿದೆ. ಅವರ ಮಟ್ಟದಲ್ಲೆ ಇರುವ ಇತರರೊಡನೆ ಕಾಳಗ ನಡೆಯದೆ ಇರದೆಂದು ತಿಳಿದ ಜರ್ಮನಿ, ತಾನು ಗೆದ್ದ ರಾಷ್ಟ್ರಗಳನ್ನು ತನ್ನ ಮೇಲ್ಮೆಗಾಗಿ ಒಂದುಗೂಡಿಸಲಿದೆ.

"ಪೋಲೇಂಡಿಗೆ ತೋರಿದ ದಾರಿಯೇ ಜರ್ಮನಿಯು ಯುರೋಪಿನಲ್ಲಿ ಮುಂದೆ ತರಲಿರುವ ಯೋಜನೆಗೆ ತಕ್ಕ ಉದಾಹರಣೆಯಾಗಿದೆ" ಎಂದು 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆ ಟೀಕಿಸಿದೆ.

ಭೋಪಾಲ್ ಸಂಸ್ಥಾನದಲ್ಲಿ!

ಭೋಪಾಲದ ಹಿಂದೂ ಮಹಾಸಭೆಯ ಕಾರ್ಯದರ್ಶಿ ಶ್ರೀ. ಜಮ್ನಾಪ್ರಸಾದ್ ಮುಖಾರಯ್ಯನವರು, ಕೆಲ ದಿನಗಳ ಹಿಂದೆ, ಲತೀ ಎಂಬವನೊಬ್ಬ ಇತರ ಕೆಲವು ಅಸಭ್ಯರೊಡನೆ ಹಿಂದೂ ತರುಣಿಯೊಬ್ಬಳನ್ನು ಗೇಲಿಮಾಡುತಿದ್ದುದನ್ನು ಕಂಡರು. ಅವರು ಆ ಹುಡುಗಿಯ ಹೆಸರನ್ನೂ, ಅವಳ ತಂದೆಯ ಹೆಸರನ್ನೂ ಕೇಳಿಕೊಳ್ಳುತಿದ್ದಾಗ, ಯುಸುಫ್ ಎಂಬ ಒಬ್ಬನು ಪ್ರಸಾದರನ್ನು ಹೊಡೆದ. ವಿಚಾರವನ್ನು ಅಲ್ಲಿನ ಐ. ಜಿ. ಯವರಾದ ಮಿ. ಆರ್ಮ್‌ಸ್ಟ್ರೋಂಗ್ ಎಂಬವರ ಮುಂದೆ ತರಲು, ಅವರು ಪ್ರಸಾದರೇ ಈ ಗೊಂದಲಕ್ಕೆ ಕಾರಣರೆಂದು ಸಾರತೊಡಗಿದರು.

ಹಚ್ಚಹಗಲಿನಲ್ಲಿ ಮೊಚ್ಚಿಗಾರನ ಮೇಲೆ ಅತ್ಯಾಚಾರ

ಚೌಕ್‌ಬಜಾರ್‌ನಲ್ಲಿನ ಮೊಚ್ಚಿಗಾರನಾದ ರಘುನಾಥನೆಂಬವನಿದ್ದಲ್ಲಿಗೆ, ಕೆಲವು ಅಸಭ್ಯ ಮಂದಿ ಬಂದು ಮೊಚ್ಚಿ ಖರೀದಿಮಾಡಿದರು. ಖರೀದಿ ಮಾಡುತ್ತಿದ್ದಾಗಲೇ ರಘುನಾಥನನ್ನು ಬೈದು, ಹೊಡೆದು, ಹಗಲು ಹೊತ್ತಿನಲ್ಲಿ ಸುಮಾರು ೫೦ ರೂಪಾಯಿ ಬೆಲೆ ಬಾಳುವ ಸಾಮಗ್ರಿಗಳನ್ನು ಹೊತ್ತರು. ಅವರಲ್ಲೊಬ್ಬನನ್ನು ರಘುನಾಥನು ಹಿಡಿದು ಪೋಲೀಸರ ಮುಂದೆ ತಂದಾಗ, ಪೋಲೀಸರು ಸುಮ್ಮನೆ ಆತನನ್ನು ಬಿಟ್ಟರು.

ಜುಗಾರಿ ಮಂಡಗಳು

ಭೋಪಾಲ್ ನಗರದಲ್ಲಿ ಹಿಂದುಗಳ ಮೇಲೆ ಅಕೃತ್ಯ ನಡೆಸುವುದು, ಹಿಂದೂ ನಾಗರಿಕರಿಗೆ ಹೊಡೆಯುವುದು ಸಾಮಾನ್ಯ ಕೆಲಸವಾಗಿದೆ. ಕೆಲ ಮುಸಲ್ಮಾನರು ಸಿಕ್ಕುಸಿಕ್ಕಲ್ಲಿ, ಹಿಂದೂ ಮಹಾಸಭಾ ಕೆಲಸಗಾರರನ್ನೂ ಹೊಡೆಯುತ್ತಿದ್ದಾರೆ ಎಂದೂ ವಾರ್ತೆ.

ಕೆಲ ದಿನಗಳ ಹಿಂದೆ ಒಬ್ಬ ಹಿಂದೂ ಸಭೆಯ ಕೆಲಸಗಾರರೂ, ಒಬ್ಬ ಹಿಂದೂ ವಕೀಲರೂ ನಡುಬೀದಿಯಲ್ಲಿ ಹೊಡೆಯಲ್ಪಟ್ಟರು. ಮಾತ್ರವಲ್ಲ, ಹೊಡೆದವರೇ ಪೋಲೀಸ್ ಸ್ಟೇಶನಿಗೆ ಹೋಗಿ, ಈ ಕೃತ್ಯಕ್ಕೆ ಬೇರೆ ಜನರು ಹೊಣೆಯೆಂದೂ ವರದಿ ಮಾಡಿದರು.

ಭೋಪಾಲವು ಜುಗಾರಿ ಮಂಡಗಳಿಂದ ತುಂಬಿ ಹೋಗಿದೆ. ಪ್ರತಿಯೊಂದು ಮಂಡವೂ, ಒಬ್ಬೊಬ್ಬನ ಅಂಕೆಯಲ್ಲಿದ್ದು, ಅವನ ಕೈಕೆಳಗೆ ಹಲವು ಮಂದಿ ಅಸಿರಿದ್ದಾರೆ. ಈ ವಿಚಾರವೆಲ್ಲ ಪೋಲೀಸರಿಗೆ ತಿಳಿದಿದ್ದರೂ, ಅವರೂ ಈ ಮಂಡಗಳ ಪ್ರೋತ್ಸಾಹಕರಾದುದರಿಂದ ಏನನ್ನೂ ಮಾಡದಾಗಿದ್ದಾರೆ.

ಇಂದು ಮಾನವಂತ ಹಿಂದುಗಳ ಜೀವನವೆಲ್ಲ ಸಂದಿಗ್ಧದಲ್ಲಿ ನಿಂತಿದೆ. ಎಂದಿಗೆ ಮಾನ, ಧನ, ಪ್ರಾಣಗಳು ಅಪಾಯಕ್ಕೆ ಗುರಿಯಾಗುವವೆಂಬುದು ಇವರಿಗೆ ತಿಳಿಯದಾಗಿದೆ.

ಭೋಪಾಲದ ಸಿವಿಕ್ ಗಾರ್ಡ್

ಕೆಲ ಸಂಸ್ಥಾನಗಳಂತೆ, ಇಲ್ಲೂ ಅಸಭ್ಯ ಮಂದಿಯ ಸಿವಿಕ್ ಗಾರ್ಡ್ ತಲೆ ಎತ್ತಿದೆ. ಅತ್ಯಾಚಾರ, ಅಕೃತ್ಯಕ್ಕೆ ಮನಸ್ಸುಮಾಡುವವರು ಹಲವರು ಇದನ್ನು ಸೇರಿಕೊಂಡಿರುವರಲ್ಲದೆ, ಮಾನವಂತರನ್ನು ಈ ಸಿವಿಕ್ ಗಾರ್ಡ್ ದಳದಲ್ಲಿ ಕಾಣುವುದು ಅಪರೂಪವಾಗಿದೆ.

ಮೈಸೂರು ಸಂಸ್ಥಾನದ ಸುದ್ದಿಗಳು

(ಸ್ವಂತ ಸುದ್ದಿಗಾರರಿಂದ) ಬೆಂಗಳೂರು

ಬಿನ್ನಿ ಮಿಲ್ಲಿನಲ್ಲಿ ೫ ಸಾವಿರ ಮಂದಿ ಕೆಲಸಗಾರರ ಮುಷ್ಕರ

ಬೆಂಗಳೂರಿನಲ್ಲಿರುವ ಬಿನ್ನಿ ಮಿಲ್ಲಿನಲ್ಲಿ ಎರಡು ದಿವಸಗಳ ವರೆಗೆ ಕೆಲಸಗಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಿದ್ದರು. ಕೆಲಸಗಾರರು ಬೋನಸ್ ಕೊಡಬೇಕೆಂದು ಕೇಳಿದರೆಂದೂ, ಮಿಲ್ಲಿನ ಅಧಿಕಾರಿಗಳು ಅದನ್ನು ಮುಂದಿನ ತಿಂಗಳು ೧೭ನೇ ತಾರೀಕು ಕೊಡುವುದಾಗಿ ತಿಳಿಸಿದರೆಂದೂ, ಬೋನಸ್ಸು ನ್ಯಾಯವಾಗಿ ೧೩ನೇ ತಾರೀಕು ಶನಿವಾರವೇ ಕೊಡಬೇಕಾಗಿತ್ತೆಂದೂ ಹೇಳಲಾಗಿದೆ. ಬೋನಸ್ ವಿಚಾರದಲ್ಲಿ ಅಸಮಾಧಾನಗೊಂಡು, ಕೆಲಸಗಾರರು ಮುಷ್ಕರ ಹಿಡಿದರು. ಮಿಲ್ಲಿನ ಬಳಿಯಲ್ಲಿ ಪೋಲೀಸರ ಉಸ್ತುವಾರಿಯು ಬಹಳ ಬಲವಾಗಿತ್ತು. ಅನೇಕ ರಿಜರ್ವ್ ಪೋಲೀಸ್ ಪಡೆಯೂ ಇದ್ದಿತು.

ಮಿಲ್ಲಿನ ಕೆಲಸಗಾರರೆಲ್ಲರೂ ಧರ್ಮಾಂಬುಧಿ ಕೆರೆಯ ವೈದಾನದಲ್ಲಿ ಸಭೆ ಸೇರಿ, ತಾವುಗಳೆಲ್ಲರೂ ದಿವಾನ್‌ರವರನ್ನು ಭೇಟಮಾಡಿ, ತಮ್ಮ ಕುಂದುಕೊರತೆಗಳನ್ನು ತಿಳಿಸಬೇಕೆಂದು ತೀರ್ಮಾನಿಸಿದರು. ಅದರಂತೆ ಕೆಲಸಗಾರರೆಲ್ಲರೂ ದಿವಾನರ ಬಂಗಲೆಗೆ ಹೋದರು. ದಿವಾನ್ ಸಾಹೇಬರು ಕೆಲಸಗಾರರ ಕೆಲವು ಮುಖಂಡರುಗಳನ್ನು ಬರಮಾಡಿಕೊಂಡು, ಅವರ ಕುಂದುಕೊರತೆಗಳನ್ನು ಸಾವಧಾನದಿಂದ ಕೇಳಿದರು. ಕೆಲಸಗಾರರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸುವಂತೆ ಏರ್ಪಾಡು ಮಾಡುವುದಾಗಿಯೂ, ಬೊಂಬಾಯಿ, ಮದರಾಸು, ನಾಗಪುರ ಮುಂತಾದ ಕಡೆಗಳಲ್ಲಿರುವ ಮಿಲ್ಲುಗಳಲ್ಲಿ ಕೆಲಸಗಾರರಿಗೆ ಯಾವ ರೀತಿಯ ಸೌಲಭ್ಯಗಳಿವೆ ಎಂಬುದನ್ನು ವಿಚಾರಿಸಿ, ಬಿನ್ನಿ ಮಿಲ್ಲಿನಲ್ಲಿಯೂ, ಅದರಂತೆ ಆ ಏರ್ಪಾಡು ಆಗುವಂತೆ ಆಜ್ಞೆ ಮಾಡುತ್ತೇವೆ ಎಂದೂ ದಿವಾನ್ ಸಾಹೇಬರವರು ಕೆಲಸಗಾರರಿಗೆ ತಿಳಿಸಿದರು. ದಿವಾನ್ ಸಾಹೇಬರವರ ಉಪದೇಶದಂತೆ ಕೆಲಸಗಾರರು ಕೆಲಸಕ್ಕೆ ಹೋದರು.

ಮಿಲ್ಲಿನ ಅಧಿಕಾರಿಗಳು ಒಂದು ಪ್ರಕಟಣೆ ಹೊರಡಿಸಿ, ಬೋನಸ್ಸನ್ನು ಮುಂದಿನ ತಿಂಗಳು ಅಥವಾ ಅದಕ್ಕೆ ಮುಂಚೆಯೇ ಕೊಡುವುದಾಗಿ ತಿಳಿಸಿರುವರು.

ಯುದ್ಧ ಮತ್ತು ಮೈಸೂರು; ದಿವಾನರ ಭಾಷಣ; ಯುದ್ಧನಿಧಿಗೆ ಸಹಾಯ

ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು, ಮೈಸೂರು ಸಂಸ್ಥಾನದಲ್ಲಿ ಏರ್ಪಡಿಸಿರುವ ಯುದ್ಧನಿಧಿಯ ಸಂಬಂಧವಾಗಿ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸರಕಾರದ ಅಧಿಕಾರಿಗಳೂ ಖಾಸಗಿ ದೊಡ್ಡ ಮನುಷ್ಯರುಗಳೂ ಆಗಮಿಸಿದ್ದರು.

ದಿವಾನ್‌ರವರು ತಮ್ಮ ಅಧ್ಯಕ್ಷಭಾಷಣ ಮತ್ತು ಯುದ್ಧದಲ್ಲಿ ಮೈಸೂರು ಭಾಗ ವಹಿಸುವ ವಿಚಾರವನ್ನು ತಿಳಿಸಿದರು.

[ಪುಟ ೭ ನೋಡಿ]

LIFE INSURANCE

IS THE ONE INVESTMENT WHICH IN PEACE OR WAR KNOWS NO DEPRECIATION. IT IS THE ONLY SCIENTIFIC MEANS WHICH PLANS WITH PRUDENCE AND CERTAINTY THE HAZARDS OF UNKNOWN TOMORROW.

EVERY PREMIUM PAID ON YOUR INSURANCE IS A STONE LAID FOR YOUR FINANCIAL WELL-BEING. YOUR INSURANCE POLICY MAKES YOU CONSCIOUS THAT YOU & YOUR DEAR ONES ARE PROTECTED AND PROVIDED FOR THE FUTURE.

LET "POPULAR", THE SUCCESSFUL AND PROGRESSIVE LIFE OFFICE OF YOUR OWN DISTRICT, PLAN YOUR FUTURE.

THE POPULAR INSURANCE CO., LTD.,

HEAD OFFICE: **MANGALORE,** S. I.

50 ವರ್ಷಗಳಿಂದ ಜಗತ್ಪ್ರಸಿದ್ಧ

ಮದನಮಂಜರಿ ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತು ವಿಕಾರ ಮೊದಲಾದವುಗಳನ್ನು ಶೀಘ್ರದಲ್ಲೇ ಪರಿಹರಿಸಿ ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ ಕ್ರಯ: ಡಬ್ಬಿ 1ಕ್ಕೆ 1 ರೂ.

ರಮಣ ವಿಲಾಸಿನೀ

ಕಾಮಶಕ್ತಿ ಹೆಚ್ಚಿಸಿ ವೀರ್ಯಸ್ತಂಭನೆ ಮಾಡಿ, ರತಿಸುಖದಲ್ಲಿ ಪರಮಾನಂದವನ್ನುಂಟುಮಾಡುವ ನರ್ಬಾಧಿರ ಔಷಧ. ಕ್ರಯ: ಡಬ್ಬಿ 1ಕ್ಕೆ 1 ರೂ.

ಮದನಮಂಜರಿ ಫಾರ್ಮಸಿ,
184, ಚೈನಾ ಬಜಾರ್, ಮದ್ರಾಸ್.

For Registration of Patents, Designs and Trade Marks, write to:

C. G. ANUND & CO,
Patent & Trade Mark Attorneys,
14, Hare Street, **CALCUTTA.**

WANTED

Urgently, a Secondary Grade Trained Teacher for the post of a Headmaster; permanent post. Apply stating age, experience, minimum salary required to:

The Secretary,
Vani Vilas H. E. School,
MIJAR, S. K.

ವಿದೇಶ

ಬಾಲ್ಟಿಕ್ ರಾಜ್ಯಗಳು "ಸೋವಿಯಟ್" ಆಗಿ ಮಾರ್ಪಟ್ಟವು

ಲಿಥುವೇನಿಯವು ಸೋವಿಯಟ್ ಸೋಶಿಯಲಿಸ್ಟಿಕ್ ರಿಪಬ್ಲಿಕ್ ಆಗಿ ಮಾರ್ಪಡುವುದೆಂದು ಅಲ್ಲಿನ ಒಳದೇಶದ ಮಂತ್ರಿಗಳು ಸಾರಿರುತ್ತಾರೆ. ಇದನ್ನು ಕಂಡು ಎಸ್ಟೋನಿಯವೂ, ಲಟೀವಿಯವೂ, ಸೋವಿಯಟ್ ಯೂನಿಯನ್ನನ್ನು ಸೇರಲು ನಿರ್ಧರಿಸಿವೆ.

ಸಮುದ್ರದಲ್ಲಿ ಬ್ರಿಟಿಷರ ನಷ್ಟ

"ಸಲಮನ್" ಎಂಬ ಬ್ರಿಟಿಷ್ ಸಬ್‌ಮೆರೈನ್ ಒಂದು ಕಾಣೆಯಾಗಿದೆ. ಮೈನುಗಳನ್ನು ಗುಡಿಸುವ ಟ್ರಾವಲರ್ "ಕ್ರೆಸ್ಟ್ ಫ್ಲವರ್" ಮುಳುಗಿಸಲ್ಪಟ್ಟಿದೆ. ಡಿಸ್ಟ್ರೊಯರ್ "ಬ್ರೆಜನ್" ಜಲಸಮಾಧಿಯನ್ನು ಕಂಡಿದೆ.

೨೧ ನಾಜಿ ವಿಮಾನಗಳ ಧ್ವಂಸ

ಕಳೆದ ವಾರ ಬ್ರಿಟಿಷ್ ತೀರದ ಸುತ್ತಲೂ ನಡೆದ ಹೊಡೆದಾಟದಲ್ಲಿ ೨೧ ನಾಜಿ ವಿಮಾನಗಳು ಧ್ವಂಸಮಾಡಲ್ಪಟ್ಟವೆಂದು ಹೇಳಲಾಗಿದೆ.

ಇಂಗ್ಲೆಂಡಿನ ಮೇಲೆ ಆಕ್ರಮಣ

ಇಂಗ್ಲೆಂಡನ್ನು ಆಕ್ರಮಿಸಬೇಕೆಂದೂ ಜರ್ಮನಿಯ ಜನರಲ್ ವಾನ್ ಬ್ರೌಚಿಟ್‌ರವರೂ, ಬೇಡವೆಂದು ಜನರಲ್ ಕೈಟಲ್‌ರವರೂ ಭಿನ್ನಾಭಿಪ್ರಾಯಪಟ್ಟಿರುವುದಾಗಿ ವಾರ್ತೆ. ಪ್ರಾಯಶಃ ಈ ಭಿನ್ನಾಭಿಪ್ರಾಯವೇ ಸದ್ಯ ಹಿಟ್ಲರನ ಕೈಕಟ್ಟಿ ಕುಳ್ಳಿರಿಸಿದ್ದರೂ ಇರಬಹುದೇನೋ!

ಲಟೀವಿಯದಲ್ಲಿ

ಲಟೀವಿಯದ ಎಲ್ಲ ಭೂಮಿಯೂ ಈಗ ಜನಾಂಗದ್ದಾಗಿದೆ. ಪ್ರತಿಯೊಬ್ಬ ರೈತನಿಗೂ ೫೦ ಹೆಕ್ಟೇರಿಯದ ಭೂಮಿ ದೊರೆಯುತ್ತದೆ. ಇದಕ್ಕಿಂತ ಹೆಚ್ಚು ಭೂಮಿ ಇರುವವರು, ಅದನ್ನು ಕಡಿಮೆ ಭೂಮಿ ಇರುವವರಿಗೆ ಹಂಚಲಿಕ್ಕಾಗಿ ಸರಕಾರದ ವಶ ಬಿಟ್ಟುಕೊಡಬೇಕು. ಇಲ್ಲಿಯ ಯಾವತ್ತು ಬೇಂಕುಗಳೂ "ಸಾರ್ವಜನಿಕ"ವಾಗಲಿವೆ. ಹಾಗೆಯೇ ಇಲ್ಲಿಯ ಕೈಗಾರಿಕೆಯ ಕಾರ್ಖಾನೆಗಳೂ!

ರಾಯಲ್ ವಿಮಾನಬಲದ ಹಾವಳಿ

ಹಂಬರ್ಗ್, ಎಮ್ಡೆನ್, ಬ್ರೆಮೆನ್, ಡುಸಲ್‌ಡುರಾಫ್, ಕೊಲೋನ್ ಮತ್ತು ಎಸೆನ್‌ಗಳಲ್ಲಿ ಬ್ರಿಟಿಷ್ ವಿಮಾನಬಲದ ಹಾವಳಿಗೆ ತುತ್ತಾಗದ ಫ್ಯಾಕ್ಟರಿಗಳೊಂದೂ ಇಲ್ಲವೆಂದು ಹೇಳಲಾಗಿದೆ. ಆದರೆ ಈ ನಷ್ಟದ ವಾರ್ತೆ ಬರ್ಲಿನಿಗಾಗಲೀ, ಜರ್ಮನಿಯ ಇತರ ಪ್ರದೇಶಗಳಿಗಾಗಲೀ ಹಬ್ಬದಂತೆ ನಾಜಿಗಳು ಯಾವತ್ತು ಏರ್ಪಾಡುಗಳನ್ನೂ ಮಾಡಿದ್ದಾರೆ. ಹಿಟ್ಲರನೇನೋ ಜರ್ಮನಿಯಲ್ಲಿ ಇನ್ನೂ ತನ್ನ ಮೇಲಿನ ಜನರ ಪ್ರೀತಿಯನ್ನು ಉಳಿಸಿಕೊಂಡಿದ್ದರೂ, ಬ್ರಿಟಿನ ಮೇಲೆ ದಾಳಿ ಮಾಡುವುದರಿಂದ ಜರ್ಮನಿಗೆ ಉಂಟಾಗಬಹುದಾದ ಅಪಾಯದ ವಿಷಯದಲ್ಲಿ ಜರ್ಮನಿಯಲ್ಲಿ ಹಲವರು ಚಿಂತೆಗೀಡಾಗಿದ್ದಾರೆ.

ವಾಯುಮಂಡಲದ ಯುದ್ಧ

ಜರ್ಮನ್ ವಿಮಾನಗಳು ಆಗಾಗ ಬ್ರಿಟಿನಿನ ನಗರಗಳ ಮೇಲೆ ಹಾರಾಡಿ ಬಾಂಬು ಸುರಿಸುತ್ತಲೇ ಇವೆ. ಬ್ರಿಟಿಷ್ ಕೋವಿಗಳು ಅವುಗಳಲ್ಲಿ ಹಲವನ್ನು ಕೆಡವಿ ಹಲವನ್ನು ಹಿಂದಕ್ಕೆ ಓಟ್ಟುತ್ತಲೇ ಇವೆ. ಈಚಿಗೆ ಸ್ಕಾಟ್‌ಲ್ಯಾಂಡಿನ ಮೇಲೆ ಜರ್ಮನರು ನಡೆಸಿದ ದಾಳಿಯಲ್ಲಿಯೂ ಹೀಗೇ ಆಯಿತು. ಬ್ರಿಟಿನಿನಲ್ಲಿ ಜರ್ಮನರು ವಿಮಾನ ಯುದ್ಧವನ್ನಾರಂಭಿಸಿದ ಬಳಿಕ ಅವರು ಸುಮಾರು ೨೦೦ ವಿಮಾನಗಳನ್ನು ಕಳೆದುಕೊಂಡಿರುವುದಾಗಿಯೂ, ಕಳೆದ ಸೆಪ್ಟೆಂಬರ ತಾ. ೩ರಿಂದ ಜರ್ಮನಿಯು ಸುಮಾರು ೫ ಸಾವಿರ ವಿಮಾನಗಳನ್ನು ಹೋಗಲಾಡಿಸಿಕೊಂಡಿರುವುದಾಗಿಯೂ ಪ್ರಕಟವಾಗಿದೆ.

ಬ್ರಿಟಿಷ್ ತೀರದಲ್ಲಿ "ಮೈನ್" ಹಾಕಿದೆ!

ಬ್ರಿಟಿಷ್ ತೀರಗಳಲ್ಲಿ ಮೈನ್‌ಗಳನ್ನು ಹಾಕಿರುವುದರಿಂದ ವ್ಯಾಪಾರಿ ಹಡಗುಗಳಿಗೆ ಆ ಕುರಿತು ಎಚ್ಚರಿಕೆ ಹೇಳಲಾಗಿದೆ. "ಆಯರ್"ನ್ನು ಬಳಸಿಕೊಂಡು ಆ ಹಡಗುಗಳು ಬರಬೇಕೆಂದು ಈಗಿನ ಸೂಚನೆ.

ಜಪಾನಿನ ಹೊಸ ಮಂತ್ರಿಮಂಡಲ

ಈ ಮಂತ್ರಿಮಂಡಲವನ್ನು ಪ್ರಿನ್ಸ್ ಕೊನಾಯೆಯವರು ರಚಿಸುತ್ತಿದ್ದಾರೆ. ಆಗಲೇ ಹಲವು ಮಂತ್ರಿಗಳ ಹೆಸರು ಪ್ರಕಟವಾಗಿದೆ.

ಅಮೆರಿಕವೂ, ಫ್ರಾನ್ಸೂ

ಮೊದಲು ಅಮೆರಿಕವು ಫ್ರಾನ್ಸಿನೊಡನೆ ಯಾವ ರೀತಿಯ ಸಂಬಂಧವನ್ನಿರಿಸಿಕೊಂಡಿದ್ದಿತೋ ಈಗಲೂ ಪಿಟೆನ್ಸ್ ಸರಕಾರದ ಸಂಬಂಧವು ಅಮೆರಿಕದೊಡನೆ ಹಾಗೇ ಎಂದು ಅಮೆರಿಕವು ಪ್ರಕಟಿಸಿದೆ.

ಅಮೆರಿಕದ ಕಾವಲು

ಅಮೆರಿಕದ ಹೆಚ್ಚಿನ ನೌಕೆಗಳು ಹೊನಲುಲು ಬಂದರವನ್ನು ಬಿಟ್ಟು, ರಹಸ್ಯವಾದ ಅಭ್ಯಾಸಕ್ಕಾಗಿ ಹೊರಟಿವೆ. ಕೆಲವು ನೌಕೆಗಳು ಬ್ರಿಟಿಷ್ ಮತ್ತು ಅಮೆರಿಕದ ಆಡಳಿತದಲ್ಲಿರುವ ಕ್ರಿಸ್‌ಮಸ್ ದ್ವೀಪಗಳಿಗೆ ಹೋಗಲಿವೆ. ಅಲ್ಲದೆ ದಕ್ಷಿಣ ಪೆಸಿಫಿಕ್ ದ್ವೀಪಗಳ ಮೇಲೆಲ್ಲಾ ಅಮೆರಿಕ ಕಾವಲು ನಡೆಸುವುದೆಂದೂ ವಾರ್ತೆ.

ಹಿಟ್ಲರಿನ ಕಾರ್ಯಾವಧಿ

ಹಿಟ್ಲರನು ಬ್ರಿಟನಿನ ತನ್ನ ಕೆಲಸಕಾರ್ಯಗಳನ್ನು ಇದೇ ಅಕ್ಟೋಬರ ತಾ. ೧೫ರೊಳಗೆ ಮುಗಿಸಬೇಕು; ಇಲ್ಲದಿದ್ದರೆ ಜರ್ಮನಿಗೆ ಮೋಟರಿಗೆ ಅಗತ್ಯವಿರುವ ಎಣ್ಣೆಯ ಅಭಾವವುಂಟಾಗಿ ತೊಂದರೆಯಾದೀತು — ಹೀಗೆಂದು ಅಮೆರಿಕದ ಒಬ್ಬ ಎಣ್ಣೆಯ ಶಾಸ್ತ್ರಜ್ಞನ ಅಂದಾಜು.

ಇಟೆಲಿ ಅವಸ್ಥೆಗೆ ಮುದ್ರೆ ಬಿದ್ದ ಹಾಗೇ

ಈಗ ಸೂಡಾನಿನಲ್ಲಿರುವ ಅಬಿಸೀನಿಯದ ಮಾಜೀ ಚಕ್ರವರ್ತಿಗಳಾದ ಹೈಲ್ ಸಿಲಾಸಿಯವರು, ಇಟೆಲಿಯ ಮೇಲೆ ಪ್ರತೀಕಾರ ನಡೆಸಲು ಇದೇ ಸಮಯವೆಂದೂ, ಮಿತ್ರರ ಮೇಲೆ ಕೈ ಎತ್ತಿದ ಇಟೆಲಿಯ ಅವಸ್ಥೆ ಮುಗಿದ ಹಾಗೇ ಎಂದೂ, ಅಬಸೀನಿಯವು ಪುನಃ ತನ್ನ ಸ್ವಾತಂತ್ರ್ಯವನ್ನು ಗಳಿಸುವ ವರೆಗೂ ಇಟೆಲಿಯೊಡನೆ ಅದು ಯುದ್ಧ ಮಾಡುವುದೇ ಶ್ರೇಯಸ್ಕರವೆಂದೂ ತಿಳಿಸಿರುವುದಾಗಿ ಪ್ರಕಟವಾಗಿದೆ.

ಮೈಸೂರು

ಸಾಬೂನು

ಇಪ್ಪತ್ತು ವರ್ಷದ ತಯಾರಿಕೆ ಅನುಭವ

ನೈರ್ಮಲ್ಯವು

ಒಳ್ಳೆ

ಅಭ್ಯಾಸದ ಪರಿಣಾಮ

ನಿಮ್ಮ ಮೈ ಮತ್ತು ಬಟ್ಟೆಗಳನ್ನು ಶುಚಿ ಮಾಡಲು

ಮೈಸೂರು

ಸಾಬೂನುಗಳು ಕಾದಿವೆ.

ಮೈಸೂರು ಸಾಬೂನುಗಳು ಸರಕಾರದ ಆಡಳಿತದಲ್ಲಿ ಇಪ್ಪತ್ತು ವರ್ಷಗಳಿಂದಲೂ ಬೆಂಗಳೂರಿನಲ್ಲೇ ತಯಾರಾಗುತ್ತಿವೆ.

ಮೈಸೂರು

ಸ್ಯಾಂಡಲ್ ಸೋಪ್



ಅವುಗಳ
ಹಲ್ಲಿನ ಮೇಲೆ
ಅವು ಆಧರಿಸಿಕೊಂಡಿವೆ

DUNLOP

ಡನ್‌ಲಪ್ ಮಾತ್ರ

ಹಲ್ಲುಗಳು ಇರುವ ಟಾಯರುಗಳು



ರಸ್ತೆ ಅದುಮಿ ಹಿಡಿಯಲು 2000 ಹಲ್ಲುಗಳು

ಭಾರತದ ವಿದ್ಯಮಾನಗಳಿಗಾಗಿ ಭಾರತದಲ್ಲಿ ಮಾಡಲ್ಪಟ್ಟುದು

DK189

ಸುಂದರ ಯುವತಿಯರು ನರಳಲಾಗದು

ಆದರೆ, ಹೆಂಗಸರು ಅವರಿಗೆ ವಿಚಿತ್ರವೆನಿಸಿದ ವ್ಯಾಧಿಗಳಿಂದ ನರಳುತ್ತಿದ್ದರೆ ಸ್ವಾಭಾವಿಕ ಸೌಂದರ್ಯವನ್ನುಗಳಿಸಲಾರರು ಅಥವಾ ಉಳಿಸಿಕೊಳ್ಳಲಾರರು. ಸ್ವಭಾವಸಿದ್ಧ ಚರ್ಮಗಳೂ ಮತ್ತು ಆರೋಗ್ಯಯುತವಾದ ಕಾಯ್ತನವೂ ಅಕೆಯ ಅಜನ್ಮಸಿದ್ಧ ಹಕ್ಕು.

ಅರುಣ

ಗರ್ಭಾಶಯಕ್ಕೆ ಅತ್ಯುತ್ತಮ ಟಾನಿಕ್

ಮುಟ್ಟುದೋಷಗಳನ್ನೆಲ್ಲಾ ಸರಿಪಡಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ನಿಮ್ಮ ಪಿತ್ತರಸವನ್ನು ಎಚ್ಚರಿಸಿರಿ-

'ಕ್ಯಾಲೋಮಾಲ್'
ಇರದೆ- ನೀವು ಹಾಸಿಗೆಯಿಂದ
ಸಂಪೂರ್ಣ ಶಕ್ತಿ ಮತ್ತು ಸಂತೋಷ
ದೊಡನೆ ಹಾರುವಿರಿ.

ಪ್ರತಿ ದಿನವೂ ನಿಮ್ಮ ಪಿತ್ತಕೋಶದಿಂದ ಎರಡು ಪೈಂಟು ಪಿತ್ತರಸವು ನಿಮ್ಮ ಕರುಳಿಗೆ ಹರಿಯದಿದ್ದರೆ ನಿಮ್ಮ ಆಹಾರವು ಜೀರ್ಣವಾಗದೆ ಕರುಳಿನಲ್ಲಿಯೇ ಕೊಳೆಯುತ್ತದೆ. ನಾಯು ತುಂಬಿ, ಹೊಟ್ಟೆಯು ಊದಿ, ಮಲಬದ್ಧತೆಯಾಗುತ್ತದೆ. ಇಡೀ ಶರೀರ ಪ್ರಕೃತಿಯು ವಿಷಮಯವಾಗಿ, ನಿರುತ್ಸಾಹವೂ ನಿಶ್ಶಕ್ತಿಯೂ ಉಂಟಾಗಿ, ಪ್ರಪಂಚವೇ ನಿಮಗೆ ಬೇಸರಿಕೆಯನ್ನುಂಟುಮಾಡುತ್ತದೆ. ಒಮ್ಮೆ ಛೇದಿಯಾದ ಮಾತ್ರಕ್ಕೆ ಈ ರೋಗವು ಸಮೂಲ ನಾಶವಾಗುವುದಿಲ್ಲ. ಕಾರ್ಟರ್ಸ್ ಲಿಟ್ಲ್ ಲಿವರ್ ಪಿಲ್ಸ್ ಮಾತ್ರ ಕರುಳಿಗೆ ಎರಡು ಪೈಂಟು ಪಿತ್ತರಸವನ್ನು ಸಲೀಸಾಗಿ ನೀಡುತ್ತದೆ. ನೀವು ಸದಾ ಆನಂದ ಮತ್ತು ಉತ್ಸಾಹದಲ್ಲಿರುವಂತೆ ಮಾಡುವುದು. ಈ ಮಾತ್ರೆಗಳು ನಿರಪಾಯಕ ಮತ್ತು ಸೌಮ್ಯವಾಗಿದ್ದರೂ, ಪಿತ್ತರಸವನ್ನು ಸಲೀಸಾಗಿ ಸಾಗಿಸುವುದು ಆಶ್ಚರ್ಯಕರವಾಗಿದೆ. ಕೆಂಪು ಪೊಟ್ಟಣದ ಮೇಲೆ 'ಕಾರ್ಟರ್ಸ್ ಲಿಟ್ಲ್ ಲಿವರ್ ಪಿಲ್ಸ್' ಎಂಬ ಹೆಸರಿದ್ದರೆ ಮಾತ್ರ ಕೊಂಡುಕೊಳ್ಳಿರಿ. ಮಿಕ್ಕವುಗಳನ್ನು ತಿರಸ್ಕರಿಸಿರಿ. ಬೆಲೆ ಆಣೆ ೧೦. CARTER NO 37

PANDIT BANK,
MANGALORE.

ಪಂಡಿತ್ ಬೇಂಕ್,
ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ಪ ಕಾಯಂ ತೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿಯದು ಅಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಬಹಳ ಸುಲಭವಾದ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ಚಾಲ್ತಿ ತೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ	ಶೇಕಡಾ 1½%
ಸೇವಿಂಗ್ಸ್ ಬ್ಯಾಂಕ್:	ಶೇಕಡಾ 3 %

ನಿಶ್ಚು ತೇವಣಾತಿ:

6 ತಿಂಗಳುಗಳಿಗೆ	ಶೇಕಡಾ 4 %
1 ವರ್ಷಕ್ಕೆ	ಶೇಕಡಾ 4½%

PANDIT SHIVA RAO, B.A., LL.B.,
PROPRIETOR.
PANDIT SANJIVA RAO, B.A.
AGENT.

ಜ್ವರದ ಗಂಡಾಂತರವನ್ನು ವಿಜ್ಞಾನವು ನಿವಾರಿಸುತ್ತದೆ

ದುಃಖಿತರಿಗೆ ಹಾರೈಕೆ

ಬಹಳ ಜನರು ಜ್ವರಬಾಧೆಯಿಂದ ಪಾರಾದರೂ ಅದರ ವಿಪರೀತ ಪರಿಣಾಮಗಳಿಗೆ ಬಲಿಬೀಳುವರು. ಇದಕ್ಕೆ ವೈದ್ಯರು ಕಾರಣವನ್ನು ಹೇಳುವುದೇನೆಂದರೆ— ಜ್ವರಸ್ಥಿತಿಯಲ್ಲಿನ ಏರಿದ ಮೈ ತಾಪ, ಸಿಡಿಯುವಂತಹ ತಲೆನೋವು, ಬೇನೆಗಳು, ಎಲ್ಲಾ ಬರುವುದು ಜ್ವರವಿಷಗಳು ರಕ್ತದಲ್ಲಿ ಸೇರಿ ಹರಿಯುವುದರಿಂದ. ಈ ವಿಷಗಳು ದೇಹದಲ್ಲಿನ ಪರೆಗಳನ್ನು ಹಾಳುಮಾಡಿ ನರ ಮತ್ತು ಮಾಂಸಖಂಡಗಳ ಶಕ್ತಿಯನ್ನು ಹೋಗಲಾಡಿಸುತ್ತವೆ.

ಒಳ್ಳೇ ಆಹಾರ ಸೇವನೆಯಿಂದ ಈ ನಷ್ಟವನ್ನು ಸರಿಪಡಿಸಬೇಕು. ಆದರೆ ಸಾಧಾರಣ ಆಹಾರಗಳನ್ನು ದುರ್ಬಲವಾದ ಜಠರವು ಜೀರ್ಣಿಸಲಾರದು. ಹಗುರವಾಗಿಯೂ, ಪೂರ್ಣ ಪೋಷಣೆಯುಳ್ಳದ್ದಾಗಿಯೂ, ಎಲ್ಲಾ ಅಗತ್ಯ ಆಹಾರಸಾರಗಳನ್ನು ಒಳಗೊಂಡಿರತಕ್ಕದ್ದಾಗಿಯೂ ಇರತಕ್ಕ ಆಹಾರಸೇವನೆಯಿಂದ ಆರೋಗ್ಯ ಶಕ್ತಿಗಳನ್ನು ಪಡೆಯಬಹುದು. ಅಂಥಾ ಆದರ್ಶಕ ಆಹಾರವೆಂದರೆ ಹಾರ್ಲಿಕ್ಸ್. ಇದು ಬೇಗ ಗುಣ ಮುಖಕ್ಕೆ ತಂದು ಶರೀರಕ್ಕೆ ನವಚೈತನ್ಯವನ್ನು ತುಂಬುವುದು. ಆದ್ದರಿಂದಲೇ ವೈದ್ಯರಿಂದ [illegible] ಪಡೆದಿರುವುದು ಮತ್ತು ಆಸ್ಪತ್ರೆಗಳಲ್ಲಿ ಜ್ವರಾವಸ್ಥೆಯಲ್ಲಿ ಉಪಯೋಗಿಸಲ್ಪಡುತ್ತಿರುವುದು.

Money [illegible]

LOANS ARE [illegible]ANTED AT COMPETITIVE RATES ON BULLION, GOLD ORNAMENTS, GOVERNMENT PAPER, GOODS AND PRODUCE, SHARES & OTHER VALUABLE SECURITIES. ENQUIRE OF ANY OF OUR THIRTY-SEVEN OFFICES.

RESOURCES OF A CRORE

Estd. 1906
CANARA BANK, LIMITED

ಕಂಠೀರವ
KANTEERAVA
KANARESE, BI-WEEKLY

XXII] ಮಂಗಳೂರು, ತಾರೀಕು ೨೬—೭—೧೯೪೦ [೩೪
೧೯೬೨ ವಿಕ್ರಮು ಸಂವತ್ಸರದ ಆಷಾಢ ಬ। ೬ ಶುಕ್ರವಾರ

ಹೊಸ ಸೋವಿಯಟ್ ರಿಪಬ್ಲಿಕ್‌ಗಳು—ಮೂರು!

ಸೋವಿಯಟ್ ರಷ್ಯವು, ಯಾವುದೊಂದು ಗಲಭೆ ಗುದ್ದಾಟಗಳೂ ಇಲ್ಲದೆ, ತನ್ನ ಗಡಿಗಳನ್ನು ಹೇಗೆ ಶಾಂತವಾಗಿ ವಿಸ್ತರಿಸುತ್ತಿದೆ ಎಂಬುದು ಇಂದಿನ ಕಾಲದಲ್ಲಿ ಎಂತಹವನನ್ನೂ ವಿಸ್ಮಯಗೊಳಿಸಬಹುದಾದ ಒಂದು ದೊಡ್ಡ ವಿಚಾರ.

ಈಚಿಗೆ ಬಾಲ್ಟಿಕ್ ರಾಷ್ಟ್ರಗಳಾದ ಲಟವಿಯಾ, ಲಿಥುವೇನಿಯಾ ಮತ್ತು ಎಸ್ಟೋನಿಯಾ ಎಂಬ ಮೂರು ರಾಷ್ಟ್ರಗಳು ತಮ್ಮ ಪಿತೃಭೂಮಿಗೆ ಸೇರಿಕೊಂಡಿವೆ ಎಂದು ವಾರ್ತೆ ಬಂದಿದೆ. ಇದೇ ಸಮಯದಲ್ಲಿಯೇ ಈ ರಾಷ್ಟ್ರಗಳ ಜನರು ಸೋವಿಯಟಿನ ಕಡೆಗೆ ತಮ್ಮ ದೃಷ್ಟಿಯನ್ನು ಬೀರುವಂತಾದುದು "ಕಾಕತಾಳೀಯ ನ್ಯಾಯ"ವಾಗಿರಬಹುದಾದರೂ, ಬೇರೆ ಕೆಲವು ಸಂಗತಿಗಳೂ ಅವರ ಈ ತೀರ್ಮಾನಕ್ಕೆ ಕಾರಣವಾಗಿರಬಹುದೆಂಬುದೂ ನಿರ್ವಿವಾದವೇ.

ಕಳೆದ ಅಕ್ಟೋಬರದಲ್ಲಿ ರಷ್ಯಕ್ಕೂ, ಈ ಬಾಲ್ಟಿಕ್ ರಾಷ್ಟ್ರಗಳಿಗೂ ಒಂದು ಕರಾರು ನಡೆದಿದ್ದು, ಆದರ ಮೇರೆಗೆ, ಈ ಮೂರು ರಾಷ್ಟ್ರಗಳಲ್ಲಿ ತನ್ನ ಸೈನ್ಯಗಳನ್ನು ತಂದಿರಿಸಲಿಕ್ಕೂ, ಪ್ರಾಮುಖ್ಯವಾದ ಪ್ರದೇಶಗಳನ್ನು ಪ್ರವೇತಿಸಲಿಕ್ಕೂ ರಷ್ಯಾಕ್ಕೆ ಹಕ್ಕುಗಳು ದೊರಕಿದ್ದುವು. ಈ ಸಂಧಿಗಳ ಕರಾರುಗಳು ಒತ್ತಾಯದಿಂದಲೇ ನಡೆದಿದ್ದುವಾದರೂ, ಈ ಬಾಲ್ಟಿಕ್ ಪ್ರದೇಶಗಳ ಮತ್ತು ರಷ್ಯದ ಬಾಂಧವ್ಯವು ಹಿತಕರವಾಗಿಯೇ ಇದ್ದಿತು. ಈ ರಾಷ್ಟ್ರಗಳು ಸೋವಿಯಟಿನ ವಿರೋಧಿಗಳ ಹಾಗೂ ನಾಜೀ ಹಿಂಬಾಲಕರ "ಮಾತೃಸ್ಥಾನ"ವಾಗಿದ್ದರೂ, ಈ ದೇಶಗಳ ಒಳ ಆಡಳಿತದ ರಾಜನೀತಿಯಲ್ಲಿ ಕೈ ಇಕ್ಕಲು ರಷ್ಯಾ ಮುಂಬರಿಯಿತೆನ್ನಲು ಯಾವ ದಾಖಲೆಗಳೂ ಇಲ್ಲವಾಗಿವೆ.

ಕಳೆದ ನವೆಂಬರದಲ್ಲಿ "ಬಾಲ್ಟಿಕ್ ಟೈಮ್ಸ್" ಎಂಬ ಪತ್ರಿಕೆ ಹೀಗೆ ಬರೆದಿದ್ದಿತು:—"ಬಾಲ್ಟಿಕ್ ರಾಷ್ಟ್ರಗಳನ್ನು ರಷ್ಯಾ ತನ್ನ ವಶಮಾಡಿಕೊಳ್ಳುವುದೆಂದು, ಅವುಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸುವುದೆಂದು ಹಲವು ದೇಶಗಳ ಪತ್ರಿಕೆಗಳು ಈಗಲೂ ಆನ್ನುತ್ತಿವೆ. ಆ ರಾಷ್ಟ್ರಗಳು ರಷ್ಯಾದೊಳಗೆ ಅಡಕವಾಗದೆ ಗತ್ಯಂತರವೇ ಇಲ್ಲವೆಂದು ಟೀಕಿಸುತ್ತಿವೆ. ಇವೆಲ್ಲವನ್ನೂ ಕೇಳಿ ನಮಗೆ ನಗು ಬರುತ್ತಿದೆ ಅಷ್ಟೇ ಅಲ್ಲ; ಆದೇ ಪತ್ರಿಕೆ ಮುಂಬರಿಯುತ್ತ, "ಈ ಸಂಧಿಯ ಉದ್ದೇಶವು ಬಾಲ್ಟಿಕ್ ಪ್ರಾಂತದಲ್ಲಿ ಶಾಂತಿಸ್ಥಾಪನೆಯಲ್ಲದೆ ಬೇರೇನೂ ಇಲ್ಲ; ಹಾಗಾಗಿ ರಷ್ಯ ತನ್ನ ಮಾತಿನಂತೆಯೇ ನಡೆಯುತ್ತಿದೆಯಲ್ಲದೆ "ಬಾಯಲ್ಲೊಂದು, ಕೃತಿಯಲ್ಲೊಂದು" ಎಂಬಂತೆ ವರ್ತಿಸುತ್ತಿಲ್ಲ!" ಎಂದೂ ರಷ್ಯದ ಮನೋಗತವನ್ನು ಬಹಿರಂಗಪಡಿಸಿದ್ದಿತು!

ರಷ್ಯವು ನಿಜವಾಗಿಯೂ, ಈ ದೇಶಗಳನ್ನು ತನ್ನೊಳಗೆ ಐಕ್ಯವಾಗಿ ಇರಿಸಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡಿದುದಿಲ್ಲ. ಅದರ ಬದಲಾಗಿ, ನಾಜಿಗಳು ಎಸ್ಟೋನಿಯದಲ್ಲಿಯೂ, ಲಟವಿಯದಲ್ಲಿಯೂ ಬೇಕಾದಷ್ಟು ಕಿತಾಪತಿ ನಡೆಸಿ, "ಬೆಕ್ಕಿನ ಮೇಲೆ ಇಲಿ, ಇಲಿಯ ಮೇಲೆ ಬೆಕ್ಕನ್ನು ಹಾಕುವ ಯತ್ನ" ನಡೆಸಿದ್ದಾರೆ. ಆದರೆ ಕ್ರಮಶಃ ನಾಜಿಗಳ ಆಟವಲ್ಲಿ ನಿಂತು, ರಷ್ಯದಿಂದಲೇ ತಮಗೆ ಮೋಕ್ಷವೆಂಬ ಆ ರಾಷ್ಟ್ರಗಳ ಜನಗಳ ವಿಶ್ವಾಸವಲ್ಲಿ ಬೆಳೆದು ಈ ಬದಲಾವಣೆ ಉಂಟಾಯಿತೆಂಬುದು ನಿಸ್ಸಂದೇಹ.

ಕಳೆದ ಜೂನ್ ತಿಂಗಳಲ್ಲಿ ಈ ಮೂರು ರಾಷ್ಟ್ರಗಳಲ್ಲಿಯೂ ಸೈನ್ಯಬಲವನ್ನು ಹೆಚ್ಚಿಸಬೇಕೆಂಬ ಈ ಒಂದು ಅಭಿಪ್ರಾಯವು ಬಲವಾಗಿ ಬೇರೂರಿತು. ಅದರ ಪರಿಣಾಮವಾಗಿ ರಷ್ಯ ಇವುಗಳಿಗೆ ಹತ್ತಿರವಾಯಿತು. ಸೋವಿಯಟಿನ ಕೇಳಿಕೆಗಳನ್ನು ಕೂಡದೆಂದು ನಿರಾಕರಿಸಿದ ಈ ರಾಷ್ಟ್ರಗಳ ಕೆಲವು ಮಂದಿ, ಅಂದೇ ಆ ರಾಷ್ಟ್ರಗಳನ್ನು ಉಳಿದು ಹೊರಡಬೇಕಾಯಿತು.

ಈ ಮೂರು ರಾಷ್ಟ್ರಗಳಲ್ಲಿಯೂ ರಷ್ಯದ ಪರವಾದ ಜನಾಭಿಪ್ರಾಯವು ದಿನೇ ದಿನೇ ಬಲಪಡುತ್ತಿದ್ದುದರಿಂದಲೇ, ಈ ರಾಷ್ಟ್ರಗಳು ಸೋವಿಯಟ್ ಯೂನಿಯನನ್ನು ಸೇರಿಕೊಳ್ಳಲಿಕ್ಕೂ, ತಮ್ಮ ರಾಜ್ಯರಚನೆಯನ್ನು ಸೋವಿಯಟಿನಂತೆ ಮಾರ್ಪಡಿಸಿಕೊಳ್ಳಲಿಕ್ಕೂ ಸುಲಭದಲ್ಲಿ ಮಾರ್ಗವಾಯಿತು. ರಷ್ಯಾ ದೊಡ್ಡ ವೃಕ್ಷ—ಅವುಗಳ ನೆರಳಲ್ಲಿ ಆಶ್ರಯದಲ್ಲಿ ಬಾಳೋಣವೆಂದು ಈ ಮೂರು ಚಿಕ್ಕ ರಾಷ್ಟ್ರಗಳು ಯೋಚಿಸಿದುದೂ ಸಾರ್ಥಕವಾಯಿತು. ಯಾವುದೊಂದು ಗಲಭೆ, ಗೊಂದಲವಿಲ್ಲದೆ ಕಾಲ ಬುಡಕ್ಕೆ ಬಂದ ಈ ಮೂರು ರಾಷ್ಟ್ರಗಳನ್ನು, ರಷ್ಯಾ ತನ್ನ ಮಡಿಲಲ್ಲಿ ಇರಿಸಿಕೊಂಡು ಕಾಪಾಡಲು ಅನುವಾದುದೂ ವಿಹಿತವೇ ಆಯಿತು!

ಹಿಟ್ಲರರಿಗೆ ಲಾರ್ಡ್ ಹಾಲಿಫಾಕ್ಸರ ಉತ್ತರ

ಲಂಡನಿನ ಈಚಿಗಿನ ತಮ್ಮದೊಂದು ಬ್ರಾಡ್‌ಕಾಸ್ಟ್ ಭಾಷಣದಲ್ಲಿ, ಲಾರ್ಡ್ ಹಾಲಿಫಾಕ್ಸರು ಹಿಟ್ಲರರಿಗೆ ತಕ್ಕ ಉತ್ತರವನ್ನೇ ಹೇಳಿರುವರು.

"ಹಿಟ್ಲರ್ ಬ್ರಿಟಷ್ ಸಾಮ್ರಾಜ್ಯವನ್ನು ನಾಶಮಾಡುವ ಇಚ್ಛೆ ತನಗಿಲ್ಲವೆನ್ನುತ್ತಾನೆ; ಆದರೆ ಸಂಧಾನವು ನ್ಯಾಯಸಹಿತವಾಗಿರಬೇಕೆನ್ನಲು ಅವನ ಭಾಷಣದಲ್ಲಿ ಸೂಚನೆಗಳಿಲ್ಲ. ಯುರೋಪಿನ ಯಾವ ಜನಾಂಗಕ್ಕಾದರೂ—ಅವನೇ ಪದೇ ಪದೇ ಜರ್ಮನಿಗೆ ಸಾರಿದ—ಆ ಸ್ವಯಂ ನಿರ್ಧಾರಕ್ಕೆ ಹಕ್ಕು ಉಂಟೆಂದು ಹಿಟ್ಲರ್ ಒಪ್ಪುವುದಿಲ್ಲ. ಬ್ರಿಟನಿಗೆ ಅವನ ವಿನಂತಿ ಏನಿದ್ದರೂ ಆದು ಭಯದ ಮೂಲಕವಾಗಿದೆ. ಅವನ ವಾದವೆಲ್ಲ ಭಯಪ್ರದರ್ಶನದ ನುಡಿಗಳಿಂದಲೇ ತುಂಬಿದೆ. ಜನಾಂಗಗಳ ಭವಿಷ್ಯದ ಕುರಿತು ಅವನು ಸುಮ್ಮನಿರುವುದು ಅರ್ಥವತ್ತಾಗಿದೆ" ಎಂದು ಲಾರ್ಡರು ಹಂಗಿಸಿರುವರು!

"ನಮಗೆ ಎಂದೂ ಯುದ್ಧಬೇಕಾಗಿಲ್ಲ. ಆಗತ್ಯವಿರುವುದಕ್ಕಿಂತಲೂ ಒಂದು ಗಳಿಗೆಯಾದರೂ ಹೆಚ್ಚಿಗೆ ಯುದ್ಧ ನಡೆಸಲು ಇಲ್ಲಿ ಯಾರಿಗೂ ಅಪೇಕ್ಷೆ ಇಲ್ಲ. ಆದರೆ ನಮಗೂ ಇತರರಿಗೂ ಸ್ವಾತಂತ್ರ್ಯವು ಸಿದ್ಧಿಸುವ ವರೆಗೆ ನಾವು ಯುದ್ಧವನ್ನು ನಿಲ್ಲಿಸುವೆವು."

ಹಿಟ್ಲರನು ಹೇಗೆ ಅಧಿಕಾರಕ್ಕೆ ಬಂದ, ಜರ್ಮನಿಯ ಹಿತಾಸಕ್ತಿ ಮಾತ್ರವೇ ತನ್ನ ಗುರಿ ಎಂದು ಅವನು ಹೇಗೆ ಸಾರಿದ ಎಂದು ಮುಂತಾಗಿ ಲಾರ್ಡ್ ಹಾಲಿಫಾಕ್ಸರು ಸಾರುತ್ತ ಜರ್ಮನರು ಬರೇ ಯಂತ್ರಗಳೆಂದೂ, ಮನುಷ್ಯ ಕುಲದ ಈ ಮಹಾ ವಿಪತ್ತನ್ನು ತಡೆಯುವುದು ಅಗತ್ಯವೆಂದೂ ಅವರು ಸೂಚಿಸಿದರು. ಜತೆಯಲ್ಲಿಯೇ ಬ್ರಿಟಷರ ಕರ್ತವ್ಯಗಳೇನೆಂದೂ ನಿರೂಪಿಸಿರುವರು.

ಹಿಂದೀಯರ ಸ್ವಾತಂತ್ರ್ಯ ಲಾಭಕ್ಕಾಗಿ!

ಜಗತ್ತಿನಲ್ಲಿ ಸುಖ ಶಾಂತಿ ನೆಲಸಬೇಕು, ಹಿಂದುಸ್ಥಾನದ ಪ್ರಜೆಗಳಿಗೆ ಶಾಂತವಾರ್ಗದಿಂದ ಸಂಪೂರ್ಣ ಸ್ವಾತಂತ್ರ್ಯ ದೊರಕಬೇಕು, ಹಿಂದೂಗಳು ಗೌರವಜೀವನವನ್ನು ಸಾಗಿಸುವ ಸ್ವಾತಂತ್ರ್ಯ ಪಡೆಯಬೇಕು, ಅವರು ಇಂಡಿಯದಲ್ಲಿ ಸುಖವಾಗಿ ಬಾಳಬೇಕು—ಎಂಬಿತ್ಯಾದಿ ಉದ್ದೇಶಗಳನ್ನು ಇಟ್ಟುಕೊಂಡು ಪಂಡಿತ ಮದನಮೋಹನ ಮಾಳವ್ಯರು ೧೦ ದಿನಗಳ ವರೆಗಿನ ಒಂದು ಯಜ್ಞವನ್ನೂ, ಪ್ರಾರ್ಥನೆಯನ್ನೂ ಪೂರೈಸಲಿರುವರು. ಈ ಮಹತ್ಕಾರ್ಯವು ಆಗೋಸ್ತು ತಾ. ಅರಲ್ಲಿ ಕಾಶಿಯ ದಶಾಶ್ವಮೇಧ ಘಾಟಿನ ಚಿತ್ತರಂಜನ ಹೂದೋಟದಲ್ಲಿ ಆರಂಭವಾಗುವುದು. ಪಂಡಿತ ವಿಶ್ವನಾಥ ಶಾಸ್ತ್ರಿ ವೇದಾಚಾರ್ಯರೇ ಇದರ ಮುಖ್ಯ ಪುರೋಹಿತರು.

ಪಾನ್ ಅಮೆರಿಕನ್ ಕಾನ್ಫರೆನ್ಸ್

ಹವನ್ನಾದಲ್ಲಿ ಈ ಕಾನ್ಫರೆನ್ಸಿನಲ್ಲಿ ಭಾಷಣ ಮಾಡುತ್ತ, ಮಿ. ಕಾರ್ಡೆಲ್ ಹಲ್ಲರು,—ಪಶ್ಚಿಮ ಗೋಳದಲ್ಲಿನ ಯುರೋಪಿನ ಸ್ವಾಸ್ಥ್ಯಗಳ ಸಂಬಂಧ ಅಮೆರಿಕದ ಯಾವತ್ತು ರಿಪಬ್ಲಿಕಗಳೂ ಸೇರಿಕೊಂಡು ಒಂದು ಸಮಷ್ಟಿಯ "ಟ್ರಸ್ಟಿ ಶಿಪ್"ನ್ನು ಸ್ಥಾಪಿಸಬೇಕೆಂದಿರುವರು. ಈ "ಟ್ರಸ್ಟಿ ಶಿಪ್"ನ ಸ್ಥಾಪನೆಯ ಉದ್ದೇಶವು ಅಮೆರಿಕದ ಜನಾಂಗಗಳ ಹಿತಾಸಕ್ತಿಯನ್ನು ರಕ್ಷಿಸುವುದು ಎಂದು ನುಡಿದಿರುವರು.

ವಿದೇಶಗಳಿಂದ ಉಂಟಾಗಿರುವ ಭಯೋತ್ಪಾದನದ ಕುರಿತು ಅವರು ಪ್ರಸ್ತಾವಿಸುತ್ತ "ಈ ಅಂಟುರೋಗದ ನಿವಾರಣೆಗೆ ತಕ್ಕ ಔಷಧವನ್ನು ಈಗಲೇ ನಾವು ಅರೆಯಬೇಕು. ಅದು ಆತ್ಮರಕ್ಷಣೆಗಾಗಿ" ಎಂದರು. ಅಮೆರಿಕದ ವ್ಯಾಪಾರದ ಬಡಾವಣೆಗಾಗಿ ಯತ್ನಗಳನ್ನು ನಡೆಸಬೇಕೆಂದೂ ಅಮೆರಿಕದ ಆರ್ಥಿಕ ಪರಿಸ್ಥಿತಿಯನ್ನು ಹೇಗೆ ವೃದ್ಧಿಗೊಳಿಸಬಹುದೆಂದೂ ಅವರು ವಿವರಿಸಿದರು.

ಹಿಂದೂದೇಶ

ಗವರ್ನರರ ಆಗಮನ ಕಾಲದಲ್ಲಿ ಹರತಾಳ

ಕಳೆದ ವರ್ಷ ಕಾತಿಯಲ್ಲಿ ಹಿಂದೂ ಮುಸ್ಲಿಮರ ಗಲಭೆ ನಡೆದು ಆ ಸಂಬಂಧ ಸರಕಾರವು ಜನಗಳ ಮೇಲೆ ಶಿಕ್ಷಾರ್ಥವಾದ ತೆರಿಗೆಯನ್ನು ಹೇರಿದ್ದಿತು. ಈ ವಿಷಯದಲ್ಲಿ ತಮ್ಮ ಅರಿಕೆಯನ್ನು ಸಲ್ಲಿಸಲು, ಆ ಜನರು ಸಂಯುಕ್ತ ಪ್ರಾಂತದ ಗವರ್ನರರ ಬಳಿಗೆ ಒಂದು ಶಿಷ್ಟ ಮಂಡಲವನ್ನು ಕಳುಹಿಸಲು ನಿರ್ಧರಿಸಿದ್ದ ಹಾಗೂ, ಆದರೆ ಗವರ್ನರರು ಅದನ್ನು ಬರ ಮಾಡಿಕೊಳ್ಳಲು ತಿರಸ್ಕರಿಸಿದ ಹಾಗೂ, ಆದೇ ಕಾರಣದಿಂದ ಕಾತಿಗೆ ಆ ಗವರ್ನರರು ಬರುವ ದಿನ, ಆ ನಗರದಲ್ಲಿನ ಹಿಂದೂ ಮುಸಲ್ಮಾನರು ಸಂಪೂರ್ಣ ಹರತಾಳವನ್ನಾಚರಿಸಿದ್ದರಾಗಿಯೂ ಪ್ರಕಟವಾಗಿದೆ.

ಶಾಲೆಯಲ್ಲಿ ಅಪಮೃತ್ಯು

ಹೈದರಾಬಾದ್ ಸಂಸ್ಥಾನದ ಹನುಮಕೊಂಡದ ಹೈಸ್ಕೂಲು ಕಟ್ಟಡದ ಮಾಡಿನ ಒಂದು ಭಾಗವು ವಿಪರೀತ ಮಳೆಯಿಂದ ಕುಸಿದುಬಿದ್ದು ಒಬ್ಬ ವಿದ್ಯಾರ್ಥಿನಿ ಮೃತಳಾದಳು; ೭—೮ ಮಂದಿಗಳಿಗೆ ಗಾಯಗಳಾಗಿವೆ. ಇವರ ಚಿಕಿತ್ಸೆಗಾಗಿ ಏರ್ಪಾಡು ನಡೆದಿದೆಯಲ್ಲದೆ, ಶಾಲೆಯ ಹೊಸ ಕಟ್ಟಡದ ನಿರ್ಮಾಣಕ್ಕಾಗಿಯೂ ವ್ಯವಸ್ಥೆಯಾಗಿದೆ.

ಲೋಕಮಾನ್ಯ ತಿಲಕರ ಪುಣ್ಯ ತಿಥಿ!

ವಿಲ್ಲಾಪಾರ್ಲನಲ್ಲಿ ಲೋಕಮಾನ್ಯ ತಿಲಕರ ಪುಣ್ಯತಿಥಿಯು ಜರುಗಿದಾಗ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಶ್ರೀ. ಭಲ್ಲೂಭಾಯ್ ದೇಸಾಯಿಯವರು ತಿಲಕರ "ಸ್ವರಾಜ್ಯವು ನನ್ನ ಆಜನ್ಮಸಿದ್ಧವಾದ ಹಕ್ಕು" ಎಂಬ ಮಂತ್ರವನ್ನು ಸ್ಮರಣೆಗೆ ತಂದುಕೊಟ್ಟು, ಆ ಧ್ಯೇಯ ಸಾಧನೆಗಾಗಿ ಪ್ರತಿಯೊಬ್ಬನೂ ತನ್ನ ಕೈಲಾದಷ್ಟು ಯತ್ನಿಸಬೇಕೆಂದರು.

"ಶ್ರೀ. ಅಜಾದರ ಕ್ಷಮೆ ಕೇಳಿ"

ಅಹಮ್ಮದಾಬಾದಿನಲ್ಲಿ ಈಚಿಗೆ ನಡೆದ ಆಜಾದ್ ಮುಸ್ಲಿಮರ ಕಾನ್ಫರೆನ್ಸ್‌ನಲ್ಲಿ ಶ್ರೀ. ಜಿನ್ನಾರವರು ಮೌಲಾನಾ ಅಬುಲ್ ಕಲಂ ಆಜಾದರಲ್ಲಿ ಬಹಿರಂಗವಾಗಿ ಕ್ಷಮೆ ಕೇಳಬೇಕೆನ್ನುವ ಒಂದು ವಿನಂತಿಯು ಮಾಡಲಾಗಿದೆ.

ಕಿಸಾನ್ ಸಭೆಗಳನ್ನು ಬಹಿಷ್ಕರಿಸಿಲ್ಲ!

ಬಂಗಾಳ ಪ್ರಾಂತದ ಕಿಸಾನ್ ಸಭೆಗಳನ್ನಾಗಲೀ, ಬಂಗಾಳ ಕಿಸಾನ್ ಸಭೆಯನ್ನಾಗಲೀ ಶಾಸನ ವಿರುದ್ಧವೆಂದು ಸಾರಿಲ್ಲವಾಗಿ ಬಂಗಾಳ ಹೋಂ ಮಿನಿಸ್ಟರರು ಪ್ರಕಟಿಸಿದ್ದಾರೆ.

ಕಲ್ಕತ್ತೆಯಲ್ಲಿ ವಿದ್ಯಾರ್ಥಿಗಳ ಗಲಭೆ

ಮುಷ್ಕರವೇ ಮೊದಲಾದ ಕಾರ್ಯಗಳಲ್ಲಿ ಸರಕಾರೀ ಕಾಲೇಜುಗಳ ಹಾಗೂ ಸರಕಾರದ ಸಹಾಯ ಪಡೆಯುವ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಬಾರದೆಂಬ ಬಂಗಾಳ ಸರಕಾರದ ಆಜ್ಞೆಯನ್ನು ಪ್ರತಿಭಟಿಸಲು ಕಲ್ಕತ್ತೆಯ ಖಾಸಗಿನ ಕಾಲೇಜಿನ ೧೫೦ ಮಂದಿ ವಿದ್ಯಾರ್ಥಿಗಳು ಕ್ಲಾಸ್ ಬಿಟ್ಟು ಮೆರವಣಿಗೆಯಾಗಿ ಇಸ್ಲಾಮಿಯಾ ಕಾಲೇಜಿನ ವಠಾರಕ್ಕೆ ಪ್ರವೇಶಿಸಿ, ಗಲಭೆ ಮಾಡಿ ಅಲ್ಲಿ ತಮ್ಮ ಮೀಟಿಂಗ್ ಜರುಗಿಸಲು ಯತ್ನಿಸಲು ಪೋಲೀಸರು ಬಂದು ಗುಂಪನ್ನು ಚದರಿಸಿದರು. ಹಾಗೆ ಮಾಡುವಾಗ ಹಲವು ವಿದ್ಯಾರ್ಥಿಗಳಿಗೆ ಗಾಯವಾಗಿದೆ. ವಿಚಾರ ನಡೆಯುತ್ತಲಿದೆ.

ಇಂಡಿಯಾ ಡಿಫೆನ್ಸ್ ಆಕ್ಟಿನ ಕಾರ್ಯಭಾರ

ಬಂಗಾಳಿ ದೈನಿಕ "ವಸುಮತಿ" ಸಂಪಾದಕ, ಮುದ್ರಕ, ಪ್ರಕಾಶಕರನ್ನು ಅದೊಂದು ಆಕ್ಷೇಪಾರ್ಹವಾದ ಲೇಖನದ ಸಂಬಂಧ ಎಚ್ಚರಿಸಿ ಬಿಡಲಾಗಿದೆ. ಅಮೃತಸರದ ಹಿಂದೂ ಮಹಾಸಭೆಯ ವೈಸ್ ಪ್ರೆಸಿಡೆಂಟ್ ಪಂಡಿತ ಗೋವರ್ಧನ ದಾಸ್ ವ್ಯಾದ್‌ರನ್ನು ಕೈದುಮಾಡಲಾಗಿದೆ.

ಶ್ರೀ. ಎಚ್. ವಿ. ಕಾಮತರಿಗೆ ದಂಡನೆ

ಯುದ್ಧಕ್ಕೆ ಸಹಾಯ ಮಾಡಕೂಡವೆಂದು ಸಮಗ್ರ ಭಾರತ ಫಾರ್ವರ್ಡ್ ಬ್ಲಾಕಿನ ಜನರಲ್ ಸೆಕ್ರಟರಿಗಳಾದ ಇವರು ಪೂನಾ ವಾಡಿಯದಲ್ಲಿ ಒಂದು ಭಾಷಣ ಕೊಟ್ಟ ಸಂಬಂಧ ಬೊಂಬಾಯಿಯಲ್ಲಿ ೯ ತಿಂಗಳ [illegible] ಸಜೆ, ೨೦೦ ರೂಪಾಯಿ

ಇಂಡಿಯಾ ಸರಕಾರದ

3% ಡಿಫೆನ್ಸ್ ಬೋಂಡುಗಳು 1946

ಶೇಕಡಾ 3ರ ಆರು ವರ್ಷಗಳ ಡಿಫೆನ್ಸ್ ಬೋಂಡುಗಳನ್ನು ಕೊಂಡುಕೊಳ್ಳುವದರ ಅತ್ಯಧಿಕ ಮೊಬಲಗಿನ ಮಿತಿ ಕಟ್ಟುಗಳನ್ನು 1940ನೇ ಅಗೋಸ್ತು ತಾರೀಕು 1ರಿಂದ ತೆಗೆದುಹಾಕಲಾಗುವದು. ಶೇಕಡಾ 3ರ 1946ರ ಡಿಫೆನ್ಸ್ ಬೋಂಡುಗಳು ಆ ತಾರೀಕು ಲಾಗಾಯಿತು ಮುಂದೆ ನೋಟೀಸು ಕೊಡುವವರೆಗೆ ಸಿಗುವುವು. ಅದನ್ನು ವಿಕ್ರಯಿಸುವ ಮೌಲ್ಯವು ರೂ. 100-0-0 ಆಗಿದ್ದು ಮುಂದೆ ಪ್ರತಿ ವಾರವೂ ಅದರ ಮೇಲೆ ಪ್ರತಿ ವಾರ ಫಲಿಸುವ ಬಡ್ಡಿಯ ಮೇರೆಗೆ ಸರಿಸುಮಾರು ಅಧಿಕವಾಗುತ್ತ ಬರುವುದು.

ಮಾರುಪಾಟಿನ ಶರ್ತಗಳು

5% ಸಾಲ 1940-43

ಈ ಸಾಲಪತ್ರಗಳು ಅವುಗಳ ಗುಜಾರಾಗುವ ಕಾಲದ ಪೂರ್ಣ ಮೌಲ್ಯದಲ್ಲಿ ಬೋಂಡುಗಳನ್ನು ಕೊಳ್ಳುವ ಬೆಲೆಯ ಬದಲಾಗಿ ಕೊಳ್ಳಲ್ಪಡುವುವು. ಶೇಕಡಾ 5ರ ಸಾಲದ ಮೇಲಣ 1940ನೇ ಸಪ್ಟಂಬರ 30ರ ವರೆಗಣ ಬಡ್ಡಿಯು ಹೊಸ ಸೆಕ್ಯುರಿಟಿಗಳನ್ನು ಕೊಡುವ ಕಾಲದಲ್ಲಿ ನಗದಾಗಿ ಕೊಡಲ್ಪಡುವದು.

ಈ ಸಾಲದ ಪ್ರಕಟಣಾ ಪತ್ರವೂ ಅಪ್ಲಿಕೇಶನ್ ಫಾರ್ಮುಗಳೂ ರಿಜರ್ವ್ ಬ್ಯಾಂಕ್ ಒಫ್ ಇಂಡಿಯಾದ ಮುಂಬಾಯಿ, ಕಲ್ಕತ್ತಾ, ಢಿಲ್ಲಿ ಮತ್ತು ಮದ್ರಾಸು ಕಾರ್ಯಾಲಯಗಳಲ್ಲೂ, ಹಿಂದುಸ್ಥಾನದ ಇತರೆಡೆಗಳಲ್ಲಿರುವ ಇಂಪೀರಿಯಲ್ ಬ್ಯಾಂಕ್ ಒಫ್ ಇಂಡಿಯಾದ ಶಾಖೆಗಳಲ್ಲೂ, ಎಲ್ಲಾ ಸರಕಾರಿ ಖಜಾನೆಗಳಲ್ಲೂ ಸಿಗುವುವು.

ಗಳ ಜುಲ್ಮಾನೆ, ತಪ್ಪಿದರೆ ಮತ್ತೆರಡು ತಿಂಗಳ ಹೆಚ್ಚಿನ ಸಜೆಗೆ ಗುರಿಯಾಗಿದ್ದಾರೆ.

ಸಿಂಧ್ ಪ್ರಾಂತದ ರಾಜನೀತಿ

ಸಿಂಧ್‌ನಲ್ಲಿ ಶಾಸನ ಸಭೆಯ ಎದುರು ಪಂಗಡದ ನಾಯಕರಾದ, ಮಾಜಿ ಪ್ರಧಾನರಾದ ಮಿ. ಅಲ್ಲಾ ಬಕ್ಷ್‌ರವರು ತಮ್ಮ ಅನುಯಾಯಿಗಳೊಂದಿಗೆ ಮಂತ್ರಿಮಂಡಲದವರನ್ನು ಸೇರಲು ನಿರ್ಧರಿಸಿದ್ದಾರೆ. ಆ ಪ್ರಾಂತದಲ್ಲಿ ಹಬ್ಬುತ್ತಿರುವ ಭಯೋತ್ಪಾದಕರ ಚಳವಳವನ್ನು ನಿರ್ಮೂಲ ಮಾಡಬೇಕೆನ್ನುವುದೇ ಹೀಗೆ ಅವರು ಸಹಕರಿಸಲು ಕಾರಣವೆಂದು ಹೇಳಲಾಗಿದೆ.

ಹಾಲ್ವೆಲ್ ಸ್ಮಾರಕವನ್ನು ತೆಗೆಯಲಾಗುವುದು

ಬಂಗಾಳದ ಪ್ರಧಾನರಾದ ಶ್ರೀ. ಫಜಲುಲ್ ಹಕ್ಕರು ಹಾಲ್ವೆಲ್ ಸ್ಮಾರಕವನ್ನು ಬೇಗನೇ ಅಲ್ಲಿಂದ ಕೀಳುವ ಯತ್ನ ನಡೆಸಲಾಗುತ್ತದೆಂದು ಬಂಗಾಳ ಶಾಸನ ಸಭೆಯಲ್ಲಿ ಪ್ರಕಟಿಸಿರುವರು, ಅಲ್ಲದೆ ಇಸ್ಲಾಮಿಯಾ ಕಾಲೇಜಿನ ಘಟನೆಯನ್ನು ವಿಚಾರಿಸಲು ಒಂದು ಸಮಿತಿಯನ್ನು ರಚಿಸುವುದಾಗಿಯೂ ಆಶ್ವಾಸನವಿತ್ತಿರುವರು.

ಸಮಗ್ರ ಭಾರತ ಕಾಂಗ್ರೆಸ್ ಕಮಿಟಿ-ಪೂನಾ

ರಾಷ್ಟ್ರಪತಿ ಆಜಾದರು ಆಗಲೇ ಕಾಂಗ್ರೆಸ್ ಕಮಿಟಿಯ ಅಧಿವೇಶನಕ್ಕಾಗಿ ಪೂನೆಗೆ ತಲುಪಿದ್ದಾರೆ. ಮಹಾತ್ಮರು ಪೂನೆಯ ಮೀಟಿಂಗಿನಲ್ಲಿ ತಾವಿರಬೇಕಾದ ಅಗತ್ಯವಿಲ್ಲವೆಂದು ಪತ್ರಮೂಲಕ ತಿಳಿಸಿದ್ದಾರೆ. ಪಂಡಿತ ಗೋವಿಂದ ವಲ್ಲಭ ಪಂತರು, ಈ ಮೀಟಿಂಗಿಗೆ ಬರಲು ಅಶಕ್ತರೆಂದು ಹೇಳಲಾಗಿದೆ. ಡಾ. ರಾಜೇಂದ್ರ ಪ್ರಸಾದರೂ, ಪಂಡಿತ ನೆಹರುಗಳೂ, ಡಾ. ಘೋಷರೂ ಇಪ್ಪತ್ತರಲ್ಲೇ ಪೂನೆಗೆ ತಲ್ಪಿರುವರು.

ಸಮಗ್ರ ಭಾರತ ಅಜಾದರ ದಿನ

ಶ್ರೀ. ಜಿನ್ನಾರವರಿಗೂ ರಾಷ್ಟ್ರಪತಿ ಆಜಾದರಿಗೂ ನಡೆದ ಟೆಲಿಗ್ರಾಮುಗಳಲ್ಲಿ ಶ್ರೀ. ಜಿನ್ನರ ಹೇಳಿಕೆಯನ್ನು ಪ್ರತಿಭಟಿಸಲಿಕ್ಕಾಗಿ "ಸಮಗ್ರ ಭಾರತ ಅಜಾದರ ದಿನ"ವನ್ನು ಆಚರಿಸಬೇಕೆನ್ನುವ ಒಂದು ಸೂಚನೆ ಹೊಸ ಡಿಲ್ಲಿಯಲ್ಲಿ ಇದೇ ಅಗೋಸ್ತು ತಾ. ೩-ಳರಲ್ಲಿ ಜರುಗುವ ಸ್ವತಂತ್ರ ಮುಸ್ಲಿಂ ಕಾನ್ಫರೆನ್ಸಿನ ಬೋರ್ಡಿನ ಮೀಟಿಂಗಿನ ಮುಂದೆ ಪರ್ಯಾಲೋಚನೆಗೆ ಬರಲಿದೆ.

ಇಂದಿನ ವಾರ್ತೆ

ಕಲ್ಕತ್ತೆಯ ಹಾಲ್ವೆಲ್ ಸ್ಮಾರಕವನ್ನು ಅಲ್ಲಿಂದ ತೆಗೆಯುವುದರಿಂದ ಆ ಸಂಬಂಧದ ಸತ್ಯಾಗ್ರಹವೂ ನಿಂತಿದೆ.

ಎಸ್ಟೋನಿಯಾ, ಲಟೀವಿಯಾ ಮತ್ತು ಲಿಥುವೇನಿಯವನ್ನು ರಷ್ಯಾ ತನ್ನಲ್ಲಿ ಐಕ್ಯಗೊಳಿಸಿದುದನ್ನು ಅಮೆರಿಕದ ಮಿ. ಸಮ್ನರ್ ವೆಲ್ಸ್‌ರು ಖಂಡಿಸಿದ್ದಾರೆ.

ಫ್ರಾನ್ಸಿನ ಮಾಜಿ ಪ್ರಧಾನರನ್ನೂ ಇನ್ನೂ ಕೆಲವು ಮಾಜಿ ಮಂತ್ರಿಗಳನ್ನೂ ಒಂದು ಫ್ರೆಂಚ್ ಕೋರ್ಟ್ ವಿಚಾರಣೆ ನಡೆಸಲಿದೆ. ಅವರ ಅಪರಾಧ—ಯುದ್ಧವನ್ನು ಸಾರಿದುದು ಮತ್ತು ಫ್ರಾನ್ಸನ್ನು ಯುದ್ಧರಂಗಕ್ಕಿಳಿಸಿದುದೇ.

ಬ್ರಿಟನಿನಲ್ಲಿ ಬಜೆಟಿನ ಕಾರ್ಯಗಳಿಗಾಗಿ ತೆರಿಗೆಗಳು ವಿಪರೀತ ಹೆಚ್ಚಿಸಲ್ಪಟ್ಟವೆ. ಆದಾಯ ತೆರಿಗೆಯ ದರ ಇನ್ನಷ್ಟಿದೆ; ಎಸ್ಟೇಟ್ ಡ್ಯೂಟಿಯಲ್ಲಿ ಸೇಕಡಾ ೧೦೦ ಏರಿಕೆ. ವಿಲಾಸ ಸಾಮಗ್ರಿಗಳ ಮೇಲೂ ತೆರಿಗೆ ಹೆಚ್ಚಿದೆ. ಬ್ರಿಟನಿನ ಯುದ್ಧದ ನಿತ್ಯ ಖರ್ಚಿಗೆ ೯ ಮಿಲ್ಯ ಪೌಂಡುಗಳು ಬೇಕಾಗುವುದರಿಂದ ತೆರಿಗೆಗಳಲ್ಲಿ ಹೀಗೆ ಏರಿಕೆ!

ಮಂಗಳೂರು

ಉಸ್ತಾದ್ ಅಬ್ದುಲ್ ಹಖ್

ಸುಪ್ರಖ್ಯಾತ ಲಾಠಿ ಆಟಗಾರರೂ, ವಾಡಿಯಾ ಚಲನಚಿತ್ರ ಸಂಸ್ಥೆಯಲ್ಲಿನ ಒಬ್ಬ ನಟರೂ ಆದ ಉಸ್ತಾದ್ ಅಬ್ದುಲ್ ಹಖ್‌ರವರು ಮಂಗಳೂರಿಗೆ ದಯೆಮಾಡಿಸಿದ್ದರು. ಸ್ಥಳೀಯ ಚಿತ್ರಾ ಟಾಕೀಸ್ ಮಂದಿರದಲ್ಲಿ ಕಳೆದ ಮೂರು ದಿನ ಇವರು ಲಾಠಿ ಪ್ರದರ್ಶನ ನಡೆಸಿದರು.

ಸ್ವಾಗತ

ಉಸ್ತಾದ್ ಅಬ್ದುಲ್ ಹಖ್‌ರನ್ನು ಸ್ವಾಗತಿಸಲು ಸಭೆಯೊಂದು ಸ್ಥಳೀಯ ಸ್ವಾಸ್ಥ್ಯ ಸಂಘದಲ್ಲಿ, ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ಸಂಜೆ ಜರುಗಿತು. ಶ್ರೀ. ಕೆ. ಕೆ. ಶೆಟ್ಟರು ಉಸ್ತಾದರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಅಧ್ಯಕ್ಷರು ವ್ಯಾಯಾಮದ ಮೇಲ್ಮೆ, ಈ ವಿಚಾರದಲ್ಲಿ ದಕ್ಷಿಣ ದೇಶ ಹಿಂದಾದುದರಿಂದುಂಟಾದ ದುರ್ದಶೆಗಳನ್ನು ವಿವೇಚಿಸಿದ ಬಳಿಕ, ಉಸ್ತಾದ್ ಅಬ್ದುಲ್ ಹಖ್‌ರವರು, ತಾನು ಇಂದು ಸಂಚಾರ ಆರಂಭಿಸಿದ ಕಾರಣವನ್ನು ವಿವರಿಸಿ, ಪ್ರತಿಯೊಬ್ಬನೂ ವ್ಯಾಯಾಮದ ಕಡೆಗೆ ತಿರುಗಬೇಕೆಂದೂ, ಲಾಠಿ ಮತ್ತು ಖಡ್ಗ ವಿದ್ಯೆಗಳು ನಮ್ಮ ಆತ್ಮ ರಕ್ಷಣೆಗೆ ಸಹಕಾರಿಯಾಗಿವೆ ಮಾತ್ರವಲ್ಲದೆ, ಅತ್ಯುತ್ಕೃಷ್ಟ ವ್ಯಾಯಾಮಗಳೆಂದೂ, ಭಾರತದ ಏಳಿಗೆ ಭಾರತದಲ್ಲಿ ಜನಿಸಿದ ಎಲ್ಲರದಿದೆಯಾದರೂ, ಕೆಲ ಮಂದಿ ಹಿಂದೂ–ಮುಸ್ಲಿಂ ಎಂಬ ಭೇದಭಾವಕ್ಕೆ ಎಡೆಕೊಟ್ಟು ದೇಶಕ್ಕೆ ಹಾನಿಮಾಡುತ್ತಿದ್ದಾರೆ; ಆದರೆ ತಾನು ಆದಾವ ತಾರತಮ್ಯಕ್ಕೂ ಬಾಗದೆ, ಪ್ರತಿಯೊಬ್ಬನಿಗೂ ಆತನು ಆದಾವ ಮತೀಯನೇ ಇದ್ದರೂ, ತನ್ನಿಂದಾದ ಸಕಲ ರೀತಿಯಿಂದಲೂ ಲಾಠಿ ಕಲಿಸಲು ಸಿದ್ಧನೆಂದೂ, ಆಗಾಗ ಈ ಕಡೆ ಬಂದು ತನ್ನ ಸೇವೆ ಸಲ್ಲಿಸುವೆನೆಂದೂ ಹೇಳಿದರು.

ಶ್ರೀ. ಕೆ. ಕೆ. ಶೆಟ್ಟರು ವಂದನೆಯನ್ನು ಅರ್ಪಿಸಿದರು.

"ಲೋಕ್ ಔಟ್"

ಕಂಕನಾಡಿಯಲ್ಲಿನ ಯಂ. ಯಸ್. ಯಂ. ಕಂಪೆನಿಯಲ್ಲಿ ಕಳೆದ ತಾ. ೮ರಲ್ಲು ಆರಂಭವಾದ "ಲೋಕ್ ಔಟ್" ಇನ್ನೂ ಮುಗಿದಿಲ್ಲ. ಕೆಲಸಗಾರರು ಕಡಿಮೆ ವೇತನಕ್ಕೆ ಕೆಲಸಮಾಡಲು ಇಚ್ಛಿಸುವವರೆಗೆ, ಕಾರ್ಖಾನೆಯು ಬಾಗಿಲು ತೆರೆಯುವುದಿಲ್ಲೆಂದು ಮಾಲಿಕರು ಹಟತೊಟ್ಟಂತಿದೆ. ಸುಮಾರು ೧೨೫ ಮಂದಿ ಕೆಲಸಗಾರರು, ಕಡಿಮೆ ವೇತನಕ್ಕೆ ಕೆಲಸಮಾಡದ ಸಂಬಂಧ ಕಳೆದ ೧೯ ದಿನಗಳಿಂದ ಕೆಲಸವಿಲ್ಲದೆ ಇದ್ದಾರೆ. ಕೆಲಸಗಾರರು ಶಾಂತರೀತಿಯಲ್ಲಿ ಇದ್ದಾರೆ!

ನಗರದ ಆರೋಗ್ಯ

ಹವೆಯ ವ್ಯತ್ಯಾಸದಿಂದ ನಗರದ ಎಲ್ಲೆಲ್ಲೂ ಜ್ವರ ಹರಡಿಕೊಂಡಿದೆ. ಅಸೌಖ್ಯದ ಸುಳಿವಿಲ್ಲದ ಮನೆಯೇ ಕಡಿಮೆ ಎಂಬಂತಾಗಿದೆ.

ಲಾಠಿ ಪ್ರದರ್ಶನ

ಸ್ಥಳೀಯ ಸ್ವಾಸ್ಥ್ಯಸಂಘದ ಸಹಾಯಾರ್ಥವಾಗಿ ಉಸ್ತಾದ್ ಅಬ್ದುಲ್ ಹಖ್ ಮತ್ತು ಶ್ರೀ. ಕೆ. ಕೆ. ಶೆಟ್ಟ ಹಾಗೂ ಇವರ ಶಿಷ್ಯರುಗಳು ಸ್ಥಳೀಯ ಮಿಶನ್ ಹೈಸ್ಕೂಲಿನಲ್ಲಿ ತಾ. ೨೮ನೇ ಆದಿತ್ಯವಾರ ಸಂಜೆ ೫½ಗೆ ಸರಿಯಾಗಿ ಲಾಠಿ ಹಾಗೂ ವ್ಯಾಯಾಮ ಪ್ರದರ್ಶನವನ್ನು ನಡೆಸಲಿರುವರು.

ಕಾರ್ಕಳ

ಮಂಜೂರಾತಿಗೆ ವಿರೋಧ

ಇಲ್ಲಿಯ "ಕ್ರೈಸ್ಟ್ ಕಿಂಗ್ ಇಗರ್ಜಿ ಶಾಲೆ" ಯವರು ಈಗ ೧೧ರಿಂದ ೫ರ ತನಕ ಎಲ್ಲಾ ದರ್ಜೆಗಳಿಗೆ ಒಂದೇ ಬಾರಿಗೆ ಮಂಜೂರಾತಿ ಕೊಡಬೇಕೆಂದು ಅರ್ಜಿ ಮಾಡಿರುವುದನ್ನು ಕೇಳಿ, ಅಂಥ ಮಂಜೂರಾತಿಯು ದೊರೆತುದಾದರೆ, ಇತರ ಶಾಲೆಗಳ ಅಭಿವೃದ್ಧಿಗೆ ಭಂಗಬರುತ್ತದಾದ್ದರಿಂದ, ಕೇವಲ ಕೆಳಗಿನ ೫ ಕ್ಲಾಸುಗಳಿಗೆ ಮಾತ್ರ, ವರ್ಷಕ್ಕೆ ಒಂದೊಂದು ಕ್ಲಾಸಿನಂತೆ ಮಂಜೂರಾತಿ ಕೊಡಬೇಕೆಂದು ಪ್ರಾರ್ಥಿಸಿ, ಇತರ ಶಾಲೆಗಳವರು ಇಲಾಖಾಧಿಕಾರಿಗಳನ್ನು ಪ್ರಾರ್ಥಿಸಿದ್ದಾರೆ.

ಸತ್ಯಾಗ್ರಹ ಸಮಿತಿ

ಇಲ್ಲಿಯ ಕಾಂಗ್ರೆಸ್ ಕಮಿಟಿಯು ಸತ್ಯಾಗ್ರಹ ಸಮಿತಿಯಾಗಿ ಮಾರ್ಪಟ್ಟಿದೆ. ಶ್ರೀಗಳಾದ ಸುಬ್ಬಣ್ಣ ಭಟ್ಟರು ಅಧ್ಯಕ್ಷ, ಯಂ. ಡಿ. ಅಧಿಕಾರಿ ಮತ್ತು ಕೆ. ವೆಂಕಟೇಶ ಪ್ರಭುಗಳವರು ಕ್ರಮವಾಗಿ ಉಪಾಧ್ಯಕ್ಷ ಮತ್ತು ಖಜಾನ್ಜಿ ಹಾಗೂ ಕೆ. ಪಾಂಡುರಂಗ ಪೈ ಮತ್ತು ಕೆ. ವಾಮನ ಪೈ ಯವರು ಈ ಸಮಿತಿಯ ಜತೆ ಕಾರ್ಯದರ್ಶಿಗಳಾಗಿ ಯೋಜಿಸಲ್ಪಟ್ಟಿರುವರು.

ಯುದ್ಧ ಸಹಾಯ

ಯುದ್ಧಾಸಕ್ತವಾದ ಮಿತ್ರ ರಾಷ್ಟ್ರಗಳಿಗೆ ಸಹಾಯ ಪ್ರಚಾರ ಮಾಡುವ ಉದ್ದೇಶದಿಂದ, ಎಲ್ಲ ಕಡೆಗಳಲ್ಲಿಯಂತೆ ಇಲ್ಲಿಯೂ ಕಮಿಟಿಗಳು ಆಗಿ, ಅವು ಯಶಸ್ವಿಯಾಗಿ ಕೆಲಸಮಾಡುತ್ತಲಿರುವವು. ಕನ್ನಡದಲ್ಲಿ ಕರಪತ್ರಗಳನ್ನು ಛಾಪಿಸಿ ಹಂಚಿ, ಸರಕಾರದ ಸಾಲಪತ್ರ ಮತ್ತು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಹಣ ವಿನಿಯೋಗಿಸುವದರಿಂದ ವಿನಿಯೋಗದಾರರಿಗೆ ದೊರೆಯುವ ಲಾಭ ಮತ್ತು ಸರಕ್ಕಾರಕ್ಕಾಗುವ ಸಹಾಯವನ್ನು ಮನದಟ್ಟು ಮಾಡಿ, ಆ ಪತ್ರಗಳ ಹಣ ವಿನಿಯೋಗವಾಗುವಂತೆ ಕಮಿಟಿಯ ಕಡೆಯಿಂದ ಪ್ರಯತ್ನಗಳು ನಡೆಯುತ್ತಲಿವೆ.

ಸಾಧಾರಣವಾಗಿ ಪ್ರಪಂಚದ ಪ್ರತಿಯೊಂದು • ಚಲನಚ್ಚಿತ್ರ
ತಯಾರಿ[redacted]ಸ್ಟಾಡಿಯೋದಲ್ಲಿಯೂ ದೇಹಸೌಂದರ್ಯ
ಕಾಪಾಡುವುದ[redacted]ಕ್ಸ್ ಟಾಯಿಲೆಟ್ ಸೋಪು ಪ್ರಸಿದ್ಧಿಪಡೆದಿದೆ.

"ಲಕ್ಸ್ ಟಾಯಿಲೆಟ್ ಸಾಬೂನು ಚರ್ಮಕ್ಕೆ ಅತ್ಯುತ್ತಮವಾಗಿದೆ. ಎಂಬುದು ನನ್ನಭಿಪ್ರಾಯ ಮತ್ತು ಅದನ್ನು ಉಪಯೋಗಿಸುತ್ತಿರುವ ಅಸಂಖ್ಯ ಚಲನ ಚಿತ್ರ ನಟಿಯರಲ್ಲಿ ನಾನೂ ಒಬ್ಬಳು" ಹೀಗೆಂದು ವಾರ್ನರ್ ವೆಂಗರ್ ಕಂಪೆನಿಯ ಪ್ರಖ್ಯಾತ ಚಿತ್ರತಾರೆಯಾದ ಜೋನ್ ಬೆನೆಟ್ಟ್‌ಲು ಹೇಳುತ್ತಾಳೆ.

ಲಕ್ಸ್ ಟಾಯಿಲೆಟ್ ಸೋಪು

LTS. 23-178—KN LEVER BROTHERS (INDIA) LIMITED

ಘಾಯಗಳಿಗೂ ಹುಣ್ಣುಗಳಿಗೂ
ಗೃಹವೈದ್ಯ

ಆಕಸ್ಮಿಕ ಗಂಡಾಂತರಗಳು ಸಾಂಬಕನ್ನು ಅನುನಿತ್ಯದ ಆವಶ್ಯಕತೆಯನ್ನಾಗಿ ಮಾಡುತ್ತವೆ

ಏನಾದರೊಂದು ಘಾಯವನ್ನಾಗಲಿ ಹುಣ್ಣನ್ನಾಗಲಿ ತನ್ನಷ್ಟಕ್ಕೆ ಬಿಟ್ಟಲ್ಲಿ ರಕ್ತವು ವಿಷಮಯವಾಗುವ ಭಯವಿದೆ. ಆದುದರಿಂದ ನಿಮ್ಮ ಜಖಮುಗಳನ್ನು ಶೀಘ್ರವಾಗಿಯೂ ಭದ್ರವಾಗಿಯೂ ವಿಷಹಾರಿ ಸಾಂಬಕ್ ನಿಂದ ವಾಸಿಗೊಳಿಸಿ. ಸಾಂಬಕ್‌ನಲ್ಲಿರುವ ಅಮೂಲ್ಯ ವನಸ್ಪತಿ ತೈಲಗಳು ಸುಲಭದಲ್ಲಿ ಗ್ರಂಥಿಗಳೊಳಗೆ ಸೇರಿಕೊಂಡು ನೋವನ್ನು ಉಪಶಮನಗೊಳಿಸಿ ಬಾತು ವಿಕೆಯನ್ನು ಕಡಮೆಗೊಳಿಸುತ್ತವೆ. ಸಾಂಬಕ್ ವಿಷಕ್ರಿಮಿಗಳನ್ನು ನಿವಾರಿಸಿ, ಕೀವನ್ನು ಒಣಗಿಸಿ ಬಂದೂ ಕಲೆಯುಳಿಯದಂತೆ ವಾಸಿಗೊಳಿಸುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳೂ ಸಾಂಬಕ್ ಒಂದು ರೂಪಾಯಿಯಾ ರೂ. 2–4ರಂತೆ ಬಿಕರಿ ಮಾಡುತ್ತಾರೆ.

ಏಜೆಂಟರು:–ಮೆಸರ್ಸ್ ದಾಫ್ತಾ & ಕೊ., ಪಾರ್ಕ್ ಟೌನ್, ಮದ್ರಾಸು.

ಯಾವಾಗಲೂ ಸಾಂಬಕ್ ಉಪಯೋಗಿಸಿ

ZAM-BUK

ಪ್ರಾಣಿಗಳ ಕೊಬ್ಬಿನಿಂದ ವಿರಹಿತವಾದುದು

ಮಲೇರಿಯಾ ಜ್ವರವನ್ನು ನಿರ್ಮೂಲಮಾಡಬೇಕೆಂಬ ಅಭಿಪ್ರಾಯದಿಂದ ಅನೇಕ ಕಂಪೆನಿಗಳು ನಾನಾ ತರದ ಔಷಧಗಳನ್ನು ತಯಾರಿಸಿದರೂ ಯಾವ ಔಷಧಕ್ಕೂ ಅಷ್ಟೊಂದು ಶಕ್ತಿಯು ಇರಲಿಲ್ಲ. ಕ್ವಿನಿನ್ ಮತ್ತು ಎಗ್ಯೂ ಮಿಕ್ಶರುಗಳಿಂದ ಈ ಜ್ವರವನ್ನು ಗುಣಪಡಿಸುವುದು ಬಹಳ ಕಷ್ಟ [redacted]. ಹಿಂದೂಸ್ಥಾನದ ಹವೆಯು ಶೀತೋಷ್ಣವಾಗಿರುವುದು ಮತ್ತು ಪರದೇಶೀಯ ಔಷಧಗಳಿಗೆ ಇಲ್ಲಿ ಮಲೇರಿಯದಂಥ ಜ್ವರವನ್ನು ಗುಣಪಡಿಸುವಷ್ಟು ಶಕ್ತಿಯಿರುವುದಿಲ್ಲ. ಕ್ವಿನಿನ್ ಮತ್ತು ಕೇಲ್ಸಿಯಮ್‌ಗಳನ್ನು ತಕ್ಕ ಪ್ರಮಾಣದಲ್ಲಿ ಬೆರಸಿ, ಪ್ರಖ್ಯಾತಿಪಟ್ಟ ವೈದ್ಯರೊಬ್ಬರು "ಸೋನಾಮಿಲ್" ಎಂಬ ಬಿಲ್ಲೆಗಳನ್ನು ಅಂಥಾ ಜ್ವರಗಳಿಗಾಗಿಯೇ ತಯಾರಿಸಿರುವರು. ಈ ಬಿಲ್ಲೆಗಳು ಮಲೇರಿಯಾ ಜ್ವರವು ಎಷ್ಟು ಕಠಿಣವಾಗಿದ್ದರೂ ಅದನ್ನು ನಿರ್ಮೂಲಗೊಳಿಸುತ್ತವೆ. ಎಲ್ಲಾ ತರದ ಅವಧಿ ಜ್ವರಗಳನ್ನೂ ಎರಡು ದಿನಗೊಮ್ಮೆ ಬರುವ ಜ್ವರಗಳನ್ನೂ ಮಲೇರಿಯವನ್ನೂ ಈ ಬಿಲ್ಲೆಗಳು ಗುಣಪಡಿಸುತ್ತವೆ ಅವು ಜನರಿಗೆ ಸಂಪೂರ್ಣ ಆರೋಗ್ಯವನ್ನು ಪುನಃ ಕೊಡುತ್ತವೆ.

25 ಬಿಲ್ಲೆಗಳ ಬಾಟ್ಲಿ 1ರ ಬೆಲೆ ರೂ. 1–4–0. 50 ಬಿಲ್ಲೆಗಳ ಬಾಟ್ಲಿ 1ರ ಬೆಲೆ ರೂ. 2–4–0.

ಹಿಂದುಸ್ಥಾನದ ಪ್ರತಿಯೊಂದು ಔಷಧಾಲಯದಲ್ಲಿಯೂ ಈ ಬಿಲ್ಲೆಗಳನ್ನು ಪಡೆಯಬಹುದು.

ಮುಖ್ಯ ಏಜಂಟರು: –

ಕೊಪಾಲ್ಕಾ ಎಂಡ್ ಕೊ., ಲಿಮಿಟೆಡ್, ನ್ಯೂ ಭಾಟ್‌ವಾಡಿ, ಬೊಂಬಾಯಿ 4.

Stockists:—T. N. NATRAJ & CO., MYSORE.

ಸೊನಾಮಿಲ್ ಬಿಲ್ಲೆಗಳು
ಮಲೇರಿಯಾ, ಅವಧಿಜ್ವರ, ಇನಪ್ಲುವೆನ್ಜ(ಶೀತಜ್ವರ) ಡೆಂಗ್ಯೂ(ಮುದುಕುಮೊರಿ)ಗಳಿಗೆ, ಅತ್ಯಂತ ಗುಣಕಾರಿಯಾಗಿವೆ.

ಮೈಸೂರು ಸಂಸ್ಥಾನದ ಸುದ್ದಿಗಳು

[೨ನೇ ಪುಟದಿಂದ]

ದಿವಾನರ ಭಾಷಣ

"ಭರತ ಖಂಡದಲ್ಲಿ ವಿಶೇಷವಾಗಿ ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ಉಪಯೋಗ ಮಾಡಿಕೊಂಡಿಲ್ಲದ ಸಾಧನ ಸಂಪತ್ತುಗಳು ವಿಪುಲವಾಗಿವೆ. ನಾವುಗಳು ಯುದ್ಧ ಸಂಬಂಧವಾದ ಸಿಡಿ ಮದ್ದುಗಳ ತಯಾರಿಗಾಗಿ ಹತ್ತಿ, ಅಮೋನಿಯಾ ಮತ್ತು ಅಸೆಟೋನ್ ಇವುಗಳನ್ನು ಒದಗಿಸ ಬಲ್ಲೆವು; ಯುದ್ಧದ ಜಹಜುಗಳೇ ಮುಂತಾದುವುಗಳ ತಯಾರಿಗಾಗಿ ಕಬ್ಬಿಣವನ್ನೂ, ಉಕ್ಕನ್ನೂ ಒದಗಿಸಬಲ್ಲೆವು; ವಿಮಾನಗಳಿಗಾಗಿ ರೇಷ್ಮೆಯನ್ನು ಒದಗಿಸಬಲ್ಲೆವು; ವಿಷವಾಯು ಬಾಧೆಯಿಂದ ರಕ್ಷಿಸಿಕೊಳ್ಳುವ ಮುಖವಾಡಗಳ ತಯಾರಿಗಾಗಿ "ಕಾರ್ಬೊನೈಜ್ಡ್ ಕೋಕನೆಟ್ ಷೆಲ್ಸ್" ಎಂಬ ಇಂಗಾಲ ರೂಪಕ್ಕೆ ತಂದ ತೆಂಗಿನ ಚಿಪ್ಪುಗಳನ್ನೊದಗಿಸಬಲ್ಲೆವು; ಸೈನ್ಯ ಶಿಬಿರಗಳ ನಿರ್ಮಾಣಕ್ಕಾಗಿ ಚೌಬೀನೆಯನ್ನು ಒದಗಿಸಬಲ್ಲೆವು; ಮತ್ತು ಸೈನಿಕರ ಉಡುಪುಗಳಿಗಾಗಿಯೂ, ಸಾಧನ ಸಲಕರಣೆಗಳಿಗಾಗಿಯೂ ವಿಧವಿಧವಾದ ಅನೇಕ ಸಾಮಗ್ರಿಗಳನ್ನೊದಗಿಸಬಲ್ಲೆವು. ಅಷ್ಟೇ ಅಲ್ಲ. ಆಹಾರ ವಸ್ತುಗಳನ್ನೂ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನೂ ಭಾರಿ ಪ್ರಮಾಣದಲ್ಲಿ ಬೆಳೆದು ಒದಗಿಸುವುದೂ ನಮಗೆ ಸಾಧ್ಯ. ಇನ್ನೂ ಅನೇಕ ವ್ಯವಸ್ಥೆಗಳೂ ನಡೆಯುವುದಾಗಿದೆ. ಅವುಗಳಲ್ಲಿ ಮೊದಲನೆಯದು ವಿಮಾನಗಳ ತಯಾರಿ ಏರ್ಪಾಡು. ಇದೇ ನಗರದ ಸಮೀಪದಲ್ಲಿ ಅದಕ್ಕಾಗಿ ಭಾರಿ ಕಾರ್ಖಾನೆಯೊಂದು ಏರ್ಪಡುತ್ತದೆ. ಆದಕಾರಣ, ಸೇವೆ ಮಾಡಲು ಇಷ್ಟ ಪಡುವವರೆಲ್ಲರಿಗೂ ಈ ಮಾರ್ಗಗಳಲ್ಲಿ ಯಥೇಷ್ಟವಾಗಿ ಕೆಲಸವಿದೆ. ಇಲ್ಲಿ ಸಭೆ ಸೇರಿರುವವರೂ ಕೂಡ ತಮತಮಗೆ ಸಾಧ್ಯವಿರುವ ರೀತಿಗಳಲ್ಲಿ ಸೇವೆಯನ್ನು ಸಮರ್ಪಿಸುವರೆಂದು ನಾನು ನಂಬಿದ್ದೇನೆ.

ಈಗ ಏರ್ಪಡಿಸಬೇಕೆಂದಿರುವ ವ್ಯವಸ್ಥೆಯ ತಪಸೀಲು ವಿವರಗಳನ್ನು ಈ ಸಭೆಯಲ್ಲಿ ಮುಂದೆ ಭಾಷಣ ಮಾಡುವ ಮಹಾಶಯರುಗಳು ವಿವರಿಸುತ್ತಾರೆ. ಈ ನೊದಲೇ ಏರ್ಪಟ್ಟ [redacted] ಯುದ್ಧ ಸಹಾಯಾರ್ಥದ ನಿಧಿಯ ವಿಚಾ[redacted]ಹುದು. ಆದರೆ ಒಟ್ಟು ಪ್ರಪಂ[redacted]ಸ್ತುವಾದ ಮಾನವ ಸ್ವಾತಂ[redacted]ಳಕ್ಕೆ ತಗುಲುವಂತೆ ಶಂಕೆ ತೋರಿರುವ [redacted] ಸಮಯದಲ್ಲಿ ಆದನ್ನು ತಪ್ಪಿಸುವುದ[redacted]ಕ್ಕಾಗಿ ನಡೆಯುತ್ತಿರುವ ಯುದ್ಧದ ಸಂಬಂಧದಲ್ಲಿ—ಅಷ್ಟು ದೊಡ್ಡ ಕೆಲಸದ ದೃಷ್ಟಿಯಿಂದ ನೋಡಿದರೆ—ಈ ಮೊತ್ತವು ತೀರ ಅಲ್ಪವಾಗಿದೆಯೆಂಬುದನ್ನು ತಾವುಗಳೆಲ್ಲರೂ ಮನಗಂಡು ಪರಿಗಣಿಸಬೇಕೆಂದು ಕೋರುವೆನು. ಈ ವಿಚಾರಕ್ಕೆ ಒಂದು ನಿದರ್ಶನವನ್ನು ಈ ಸಂದರ್ಭದಲ್ಲಿ ಸೂಚಿಸಬಹುದಾಗಿದೆ: ಸಂಸ್ಥಾನದ ೧೯೪೦–೪೧ನೆಯ ಸಾಲಿನ ಬಡ್ಜೆಟ್ಟು ಮೊನ್ನೆ ತಾನೆ ಮಂಜೂರಾಗಿದೆ. ಇದುವರೆಗೆ ಹಿಂದೆ ಎಂದೂ ದೊರೆಯದಿದ್ದಷ್ಟು ಹೆಚ್ಚಿನ ಹುಟ್ಟುವಳಿಯು ೧೯೪೦–೪೧ನೆಯ ಸಾಲಿನಲ್ಲಿ ಬರಬಹುದೆಂದು ನಾವು ನಿರೀಕ್ಷಿಸಿ ಅಂದಾಜು ಮಾಡಿದ್ದೇವೆ. ಎಂದರೆ ೪ ಕೋಟಿ ೩೯ ಲಕ್ಷ ರೂಪಾಯಿಗಳು ಬರಬಹುದೆಂದು ಅಂದಾಜು ಮಾಡಿದ್ದೇವೆ. ಎಂದರೆ, ಇಂಗ್ಲಿಷ್ ನಾಣ್ಯದಲ್ಲಿ ೩೨,೯೨,೫೦೦ ಪೌಂಡುಗಳು ಬರುವಂತೆ ಅಂದಾಜು ಮಾಡಲಾಗಿದೆ. ಬ್ರಿಟಿಷ್ ಸರಕಾರದವರು ಪ್ರತಿದಿನವೂ ೯೫ ಲಕ್ಷ ಪೌಂಡುಗಳನ್ನು ವೆಚ್ಚಮಾಡಬೇಕಾಗಿದೆ. ಹೀಗಿರುವಲ್ಲಿ ೧೦ ಲಕ್ಷ ರೂಪಾಯಿಗಳ ಮೊತ್ತವು—ಎಂದರೆ ೭೫,೦೦೦ ಪೌಂಡುಗಳ ಮೊತ್ತವು—ಎಷ್ಟು ಅಲ್ಪವೆಂಬುದು ನಿಮಗೆ ಮನದಟ್ಟಾಗಬಹುದು.

ಇಂದಿನ ಪ್ರಪಂಚದಲ್ಲಿ ಬಲ ಪ್ರದರ್ಶನ ಮಾಡಬಲ್ಲವರೇ ಧರ್ಮಪ್ರವರ್ತಕರೆನಿಸಿಕೊಳ್ಳತಕ್ಕವರು. ಆದಕಾರಣ, ಬಲಪ್ರದರ್ಶನ ಸಾಮರ್ಥ್ಯವನ್ನು ವೃದ್ಧಿಪಡಿಸಿಕೊಳ್ಳದಿರುವವರಿಗಾಗಿ ಮರುಕಪಡುವವರೂ ಇಲ್ಲ; ದಯೆ ತೋರುವವರೂ ಇಲ್ಲ. ಬಲಪ್ರದರ್ಶನ, ಬಲಪ್ರದರ್ಶನವೇ ಮೇಲುಗೈಯಾಗಿರುವುದೇ ಇಂದಿನ ಪ್ರಪಂಚದ ಲಕ್ಷಣವಲ್ಲವೆಂದು ಹೇಳಬಲ್ಲವರಾರು? ಈ ಯುದ್ಧದ ಸಂಬಂಧದಲ್ಲಿ ಭರತ ಖಂಡವು ತನ್ನ ಬಲವನ್ನೂ ಸಾಧನ ಸಂಪತ್ತುಗಳನ್ನೂ ಪೂರ್ತಿಯಾಗಿ ವಿನಿಯೋಗಿಸಿ ಸಹಕರಿಸಬೇಕು. ಭರತ ಖಂಡವು ತನ್ನ ರಕ್ಷಣೆಯ ನಿಮಿತ್ತವಾಗಿ ಸಹ ಆ ರೀತಿ ಮಾಡಬೇಕು. ಭರತ ಖಂಡವೂ, ಈ ಮಹತ್ತರ ಭಾರವನ್ನು ಭರತ ಖಂಡವು ಯಾರೊಡನೆ ವಹಿಸುತ್ತಿದೆಯೋ ಅವರೂ ಸಹ, ನಾಶಕಾರಕವಾಗಿರುವ ಈ ಘೋರ ಯುದ್ಧದಲ್ಲಿ ಜಯಲಾಭ ಹೊಂದಲನುಕೂಲಿಸುವಂತೆ ಭರತಖಂಡವು ತನ್ನಿಂದ ಸಾಧ್ಯವಿರುವ ಮಹತ್ತಮವಾದ ಪ್ರಯತ್ನವನ್ನೆಲ್ಲ ಪೂರ್ತಿಯಾಗಿ ನೆರವೇರಿಸಬೇಕು."

ದಿವಾನರ ಭಾಷಣವಾದ ನಂತರ ಯುದ್ಧಕ್ಕಾಗಿ ಹಣವನ್ನು ವಸೂಲು ಮಾಡಲು ನಾನಾ ಸಮಿತಿಗಳನ್ನು ರಚಿಸಲಾಯಿತು. ಮತ್ತು ಅನೇಕ ಠರಾವುಗಳು ಪಾಸಾದುವು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A 379/40 in O. S. 112/39.

ನಾರಾಯಣ ಭಟ್ಟ —ವಾದಿ, ಅರ್ಜಿದಾರ

ಮತ್ತು

ನಾರ್ಣಪ್ಪಯ್ಯ ಕೂಡ —ಪ್ರತಿವಾದಿರು, ರೆಸ್ಪೊಂಡೆಂಟರು

2ನೇ ರೆಸ್ಪೊಂಡೆಂಟ್ ಸುಬ್ಬಣ್ಣಯ್ಯ, ದಾಳಿಂಬ ವೆಂಕಟ್ರಮಣಯ್ಯನವರ ಮಗ, ಕಾಟುಕೇರಿ ಗ್ರಾಮದ ಪೊನ್ನಾಂಪೇಟೆ, ಕೊಡಗು ಜಿಲ್ಲಾ, ಇವರಿಗೆ.

ಮೇಲೆ ತೋರುವ ವ್ಯಾಜ್ಯದಲ್ಲಿ ಅಡವಿನ ಆಸ್ತಿ ಮಾರಾಟಕ್ಕೆ ಫೈನಲ್ ಡಿಕ್ರಿ ಕೇಳಿ ವಾದಿಯು ಕೊಟ್ಟ ಅರ್ಜಿಯ ತಸ್ದಿಯು ತಾ. 14—8—'40ಕ್ಕೆ ಹಗಲು 11 ಗಂಟೆಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ ನೀವು ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ಉದಹರಿಸದಿದ್ದರೆ ಕೋರ್ಟಿನವರು ಯುಕ್ತ ತೋರುವ ಹುಕುಂ ಕೊಡುವರು.

By order of the Court

ಪುತ್ತೂರು, 16-7-40. } B. Mangesha Rao, Pleader for Plaintiff.

ದೋಷಾರೋಪಣೆಯ ಹರಟೆ ಗಳಿಗೆ ಆರಂಭವಾಗಿದ್ದಿತು


ಮಗಳೆ, ಲೀಲನ ಮದುವೆ ನಿಷ್ಫಲಿಸುವ ವಿಚಾರ ನಿನ್ನ ಗಂಡ ನೊಡನೆ ಮಾತನಾಡಿದೆಯಾ? ಪುನಃ ಈ ಸಾರಿಯೂ ಮದುವೆ ಮುಹೂರ್ತಗಳು ಮುಗಿದು ಹೋಗುತ್ತಿವೆ
ನನಗೆ ಏನು ಮಾಡಬೇಕೋ ತೋಚವಲ್ಲದು. ಸದಾ ಆ ಮಾತನ್ನು ಮುಂದಕ್ಕೆ ತಳ್ಳುತ್ತಲೇ ಇರುತ್ತಾರೆ. ಈಚೆಚೆಗೆ ಅವರು ಹೆಚ್ಚು ಮುಂಗೋಪಿಗಳಾಗಿದ್ದಾರೆ. ಅವರನ್ನು ಯಾವುದಾದರೂ ವಿಚಾರ ಗಮನಿಸುವಂತೆ ಮಾಡುವುದೇ ನನಗೆ ಬಹಳ ಕಷ್ಟವಾಗಿದೆ. ಅವರು ಯಾವಾಗಲೂ ಬಳಲಿರುತ್ತಾರೆ


ಸ್ನೇಹಿತರಿಗೂ ಬಂಧು ವರ್ಗದವರಿಗೂ ಮುಖ ತೋರಿಸಲಿಕ್ಕೇ ನಾಚಿಕೆಯಾಗುತ್ತಲಿದೆ. ಪ್ರತಿಯೊಬ್ಬರೂ ನನ್ನ ಮಗಳಿಗೆ ಮದುವೆ ಯಾವಾಗ ಎಂದು ಕೇಳುತ್ತಿದ್ದಾರೆ. ಈಗಾಗಲೇ ದೊಷಬೊಗಳಿಗೆ ಪ್ರಾರಂಭವಾಗಿದೆ. ಕೂಡಲೆ ನೀವು ವರನನ್ನು ನಿಷ್ಫಲಿಸದಿದ್ದರೆ ನಾವು ನಮ್ಮ ಮಗಳಿಗೆ ಮದುವೆ ಮಾಡುವಂತೆಯೇ ಇಲ್ಲ
ನಾನು ಬಳಲಿ ಬೆಂಡಾಗಿರುವುದನ್ನು ನೋಡಿಯೂ ಹೀಗೇಕೆ ನನ್ನನ್ನು ಪೀಡಿಸುವೆ? ಮದುವೆಯನ್ನು ಇನ್ನು ಸ್ವಲ್ಪ ಕಾಲ ತಡೆಯಲು ಸಾಧ್ಯವಿಲ್ಲವೆ? ವ್ಯಾಪಾರವನ್ನು ಸರಿಯಾಗಿ ನಿರ್ವಹಿಸುವುದೇ ನನಗೆ ಬಹಳ ಕಷ್ಟವಾಗಿದೆ. ಮತ್ತು ವರನನ್ನು ಹುಡುಕಿಕೊಂಡು ಅಲೆದಾಡಲು ನನ್ನಲ್ಲಿ ಸ್ವಲ್ಪವೂ ತ್ರಾಣವುಳಿದಿಲ್ಲ. ಒಂದು ವೇ[redacted]ನ್ನು ನೋಡಿದರೆ ಲೇಸು

ಪ್ರಾತಃಕಾಲದ ದೌರ್ಬಲ್ಯ
ಮಲಗಿ ಏಳುವಾಗ ಆಯಾಸದಿಂದ ಏಳುವೆನೆಂದು ನೀವು ಹೇಳುವಿರಿ, ನೀವು ಹಗಲಿನಲ್ಲಿ ಉಪಯೋಗಿಸಿಹ ಶಕ್ತಿಯನ್ನು ರಾತ್ರಿ ನಿದ್ರೆ ಕಾಲದಲ್ಲಿ ಕೂಡಿಸಿಕೊಳ್ಳುವುದಿಲ್ಲವೆಂದು ಸೂಚಿಸುತ್ತದೆ. ಇದನ್ನೇ ನಾವು ಪ್ರಾತಃಕಾಲದ ದೌರ್ಬಲ್ಯವೆಂದು ಕರೆಯುವುದು. ಇದರ ಪರಿಹಾರವು ಅತಿ ಸುಲಭ. ಮಲಗುವಾಗ ಒಂದು ಲೋಟ ಹಾರ್ಲಿಕ್ಸ್ ತೆಗೆದು ಕೊಳ್ಳಿ ಎಂಬುದೇ ನನ್ನ ಸಲಹೆ

ಹಾರ್ಲಿಕ್ಸ್ ಸೇವಕರ ನೂರಹ್ಪು ಪುಷ್ಟಿಕರವಾಗಿರುವುದರಿಂದ ಅಲಸಿಕೆಯನ್ನು ನವಚೈತನ್ಯವನ್ನಾಗಿ ಮಾರ್ಪಡಿಸುತ್ತದೆ. ಹಾರ್ಲಿಕ್ಸ್‌ನಲ್ಲಿ ತುಂಬ ಹಸುಪಿನ ಹಾಲು ಮತ್ತು ಪುಷ್ಟಿಯನ್ನುಂಟು ಮಾಡುವ ಕೆನೆಯುಳ್ಳ ಮಾಲ್ಟ್ ಮತ್ತು ಜವೆಗೋಧಿಯ ಸಾರವು ಸೇರಿರುತ್ತದೆ. ಆದರಲ್ಲಿ ಹಿಟ್ಟುಲೇಶವೂ ಇರುವುದಿಲ್ಲ. ಎಲ್ಲಾ ವ್ಯಾಪಾರಿಗಳಲ್ಲೂ ಇರುವ ಹಾರ್ಲಿಕ್ಸ್ ಗ್ಲಾಸ್ ಮಿಕ್ಸರ್ ಅನ್ನೇ ಉಪಯೋಗಿಸಿರಿ

ನಿಮಗೆ ಸರಿಯಾಗಿ ನಿದ್ರೆ ಬಾರದಿದ್ದರೆ, ಆಯಾಸದಿಂದ ಎದ್ದರೆ, ಅಶಕ್ತರೂ, ನಿರುತ್ಸಾಹಿಗಳೂ ಆದರೆ, ನೀವು "ಪ್ರಾತಃಕಾಲದ ದೌರ್ಬಲ್ಯ"ದಿಂದ ಪೀಡಿತರಾಗಿರುವಿರಿ

ಹಾರ್ಲಿಕ್ಸ್

ತೆಗೆದುಕೊಳ್ಳಿರಿ

ಸುಖವಾಗಿ ನಿದ್ರಿಸುವಿರಿ, ಉತ್ಸಾಹದಿಂದ ಏಳುವಿರಿ, ಮತ್ತು ದಿನವೆಲ್ಲಾ ಹೆಚ್ಚು ಚೈತನ್ಯದಿಂದಿರುವಿರಿ

121

ಫ್ರಾನ್ಸಿನ ಹೊಸ ಅವತಾರ

[೧ನೇ ಪುಟದಿಂದ]

ಗಳ ಉಪದೇಶ ಅಥವಾ ಸುಂತ್ರಾಲೋಚನೆಯಂತೆ, "ಕಮ್ಯುನಿಸಂ"ನ್ನು ಧ್ವಂಸಮಾಡಲು ನಿರ್ಧರಿಸಿರುವುದಷ್ಟೇ ಅಲ್ಲದೆ "ನ್ಯಾಶನಲ್ ಸೋಶಿಯಲಿಜಂ"ನ ಸೂತ್ರಗಳ ಮೇರೆಗೆ, ಶ್ರಮ ಜೀವನಕ್ಕೊಂದು ನ್ಯಾಯವಾದ ಸಂದರ್ಭವನ್ನೊದಗಿಸಿ ಕೊಡಲೂ ಹವಣಿಸಿರುವಂತೆಯೂ ತೋರುತ್ತಿದೆ.

ಇನ್ನು "ಕುಟುಂಬ"ದ ಮಾತು! ಇದೇತಕ್ಕಾಗಿ ನಿಂತಿದೆ? ಆ ಶಬ್ದದ ಗೂಢವೇನು? ಫ್ರೆಂಚ್ ಸಮಾಜದ ನೈತಿಕ ಜೀವನದ ದುರವಸ್ಥೆಯನ್ನು ಅದು ಸೂಚಿಸುತ್ತದೆಯೇ? ಈಚಿಗಿನ ಸುಧಾರಣೆಯ ನಾಗರಿಕತನದ ಅಭಿಪ್ರಾಯದ ಬಿರುಗಾಳಿ ಬೀಸಿ, ಫ್ರಾನ್ಸಿನಲ್ಲಿ ಸಂಸಾರಿಕ ಬಂಧನವು ಬಹಳ ಸಡಿಲವಾಗಿದೆ ಎಂದು ಹೇಳಲಾಗಿದೆ. ಇಟೆಲಿಯಲ್ಲಿಯೂ, ಜರ್ಮನಿಯಲ್ಲಿಯೂ ಸರ್ವಾಧಿಕಾರಿಗಳು ಸಾಂಸಾರಿಕ ಜೀವನವನ್ನು ಪ್ರೋತ್ಸಾಹಗೊಳಿಸಲು ಎಲ್ಲ ಬಗೆಯ ಉಪಾಯಗಳನ್ನೂ ಕೈಕೊಂಡಿದ್ದಾರೆ. ಅತ್ತ ಫ್ರಾನ್ಸಿನಲ್ಲಿ ಮಿತಸಂತಾನದ ಪದ್ಧತಿಯು ಸರ್ವಪ್ರಕಾರದಿಂದಲೂ ಪೋಷಿಸಲ್ಪಡುತ್ತಿರಲು, ಇತ್ತ ಜರ್ಮನಿಯಲ್ಲಿ ಮತ್ತು ಇಟೆಲಿಯಲ್ಲಿ "ಹಲವು ಮಕ್ಕಳ ತಾಯಿ"ಯರು ಆಯಾ ಸರಕಾರಗಳಿಂದ ಬಹು ಮಾನಕ್ಕೆ ಪಾತ್ರರಾಗುತ್ತ ಬಂದಿದ್ದಾರೆ. ಅನ್ನುವಾಗ, ವೃದ್ಧ ತಾತಂದಿರಾದ ಮಾರ್ಶಲ್ ಪಿಟೆನ್ ರವರು ಸ್ವಭಾವಸಿದ್ಧವಾದ ತಮ್ಮ ವಿಶ್ವಾಸದಿಂದಲಾಗಲೀ, ತಮ್ಮ ಹೊಸ ಯಜಮಾನರ ಪ್ರೀತಿ ಸಂಪಾದನೆಗೋಸ್ಕರವಾಗಲೀ ಈ "ಕುಟುಂಬ"ದ ತತ್ತ್ವವನ್ನು ತಾವೂ ಅನುಸರಿಸಬೇಕಾಯಿತೆನ್ನುವಲ್ಲಿ ಎರಡು ಅಭಿಪ್ರಾಯಗಳಿರಲಾರವು.

ಫ್ರಾನ್ಸ್ ಕಾಲು ಜಾರಿದ ಬಳಿಕ, ಫ್ರಾನ್ಸಿನ ಆ ಅಪಜಯಕ್ಕೆ ಕಾರಣಗಳೇನೆಂಬುದನ್ನು ವಿಸ್ತರಿಸುತ್ತ, ಮಾರ್ಶಲ್ ಪಿಟೆನ್ಸ್ನರು, "ಕಳೆದ ಯುದ್ಧದ ಬಳಿಕ ಫ್ರೆಂಚ್ ಜನರು ವಿಲಾಸ ಪ್ರಿಯರೂ, ಕೊಡುವುದಕ್ಕೆ ಹಿಂಜರಿಯುವವರೂ, ತೆಗೆದುಕೊಳ್ಳಲಿಕ್ಕೆ ಮುಂದೆ ಬರುವವರೂ ಆಗಿಬಿಳೆದರು" ಎಂದರು. ಮತ್ತವರು ಫ್ರೆಂಚರ ಗುಣನಡತೆಯು, ಹೀಗೆ ಇಳಿಮುಖವಾದುದೇ ಇಷ್ಟೊಂದು ತೀಕ್ಷ್ಣವಾದ ಮತ್ತು ಸಂಪೂರ್ಣವಾದ ಅವರ ಅಪಜಯಕ್ಕೆ ಕಾರಣವಾಯಿತೆಂಬಂತೆ ಮಾತಾಡಿದರು. ನಿಜವಾಗಿಯೂ ಮಾ। ಪಿಟೆನ್ಸ್ ರೀಗ ಅಂತಹ ಮಹತ್ವದ ಫ್ರೆಂಚ್ ಜನಾಂಗದ ಗುಣನಡತೆಯನ್ನು ತಿದ್ದುವುದಕ್ಕಾಗಿಯೇ ಪ್ರಯತ್ನಿಸುವುದಾದರೆ, ಇಡೀ ಜಗತ್ತಿನ ಸಹಾನುಭೂತಿಯೇ ಅವರೊಡನೆ ಇರುವುದೆಂಬುದರಲ್ಲಿ ಸಂದೇಹವಿಲ್ಲ!

ಕೊನೆಯದಾಗಿ ಆ "ದೇಶ"ದ ಮಾತು. ವಾಸ್ತವವಾಗಿ ಯಾವ ದೇಶೀಯರೂ ತಮ್ಮ ದೇಶವನ್ನು ಮರೆಯಲಾರರು. ಆದರೆ ಈ "ದೇಶ"ವಲ್ಲಿ ಸಾಮ್ರಾಜ್ಯದ ಮಾತೂ ಅಡಕವಾಗಿರದಿದ್ದರೆ ಎಷ್ಟೋ ಕ್ಷೇಮ. ಇಟಲಿಯ ಪತ್ರಿಕೆಗಳಾಗಲೀ, ಎಕ್ಸಿಸ್ ರಾಷ್ಟ್ರಗಳ ಒಂದು ಮೆಂಬರನಾಗಬೇಕೆಂದು, ಮಾ। ಪಿಟೆನ್ಸ್ನರು ತಮ್ಮ ರಾಷ್ಟ್ರದ ಪರವಾಗಿ, ವಿಶ್ವಪ್ರಯತ್ನಗಳನ್ನೇ ಮಾಡಿದರೂ ಕೂಡ, ಯುದ್ಧಾರಂಭಮಾಡಿದ ಫ್ರಾನ್ಸ್, ಆದಕ್ಕೆ ಆ ಅಪರಾಧಕ್ಕೆ ತಕ್ಕ ಶಿಕ್ಷೆಯಿಂದ ಪಾರಾಗಲಾರದೆಂದು ಸಾರತೊಡಗಿದ್ದಾವೆ. ಹೀಗಿರುವಲ್ಲಿ ಮಾ। ಪಿಟೆನ್ಸ್ನರು ಆ ಸಾಮ್ರಾಜ್ಯದ ಹರಣಕ್ಕೆ ಇಂಬು ಕೊಟ್ಟು, ಬರೇ ತನ್ನ ದೇಶದೊಳಗಷ್ಟೇ ಓಡಾಡಲು ಯತ್ನಿಸುತ್ತಿರುವರೆಂದು ಊಹಿಸಬಹುದೇ?

ಇವೆಲ್ಲಾ ಹೇಗೇ ಇದ್ದರೂ ಈ ಹೊಸ ಧ್ಯೇಯವು ಅರ್ಥವತ್ತಾಗಿದೆ. ಈ ಹೊಸ ಪಲ್ಲವಿಯು ಫ್ರೆಂಚರ ಇಂದಿನ ನಿತ್ಯ ಜೀವನವನ್ನು ಚೆನ್ನಾಗಿ ಹುರಿದುಂಬಿಸಬಹುದೆಂದು ಹಾರೈಸಲಾಗಿದೆ.

ಬೆಸ್ಟಲಿಯ ಪತನದ ವಾರ್ಷಿಕೋತ್ಸವವು, ಈ ಸಲ, ಫ್ರಾನ್ಸಿನಲ್ಲಿ ಜರುಗಲಿಲ್ಲ. ಆದರೆ ಲಂಡನಿನ ಫ್ರೆಂಚ್ ಮಂದಿ ಅದನ್ನು ಇದೇ ಜುಲೈ ತಾ. ೧೪ರಲ್ಲಿ ಆಚರಿಸಿ ಮುಗಿಸಿದರು. ಜನರಲ್ ಡಿ. ಗೌಲ್ಲಿಯವರು ಆ ಮಹೋತ್ಸವವನ್ನು ಲಂಡನಿನಲ್ಲಿದ್ದ ಫ್ರಾನ್ಸಿನ ನೆಲ, ಜಲ, ವಿಮಾನ ಸೇನೆಗಳ, ಆ ಯುದ್ಧೋತ್ಸಾಹಿಗ[illegible] ಸಮ್ಮುಖದಲ್ಲಿ ನೆರವೇರಿಸಿ ಕೃತಕೃತ್ಯರಾದರು. ಅಂದು, ಬ್ರಿಟಿಷ್ ಪ್ರಧಾನರಾದ ಮಿ. ಚರ್ಚಿಲ್ಲರೂ ಆ ಜನರಲರಿಗೆ ಒಂದು ಶುಭಾಸಂಶೆಯ ಸಂದೇಶ ಕಳುಹಿಸಿ ಆದರಲ್ಲಿ "ಸ್ವತಂತ್ರವಾದ ಮತ್ತು ವಿಜಯಿಯಾದ ಫ್ರಾನ್ಸು, ಇದೇ ಈ ಜುಲೈ ತಾ. ೧೪ನ್ನು, ತನ್ನದೊಂದು ಸಂತೋಷದ, ಉತ್ಸವದ ದಿನವನ್ನಾಗಿ ಇನ್ನೊಮ್ಮೆಯೂ ಆಚರಿಸುವ ಆ ಕಾಲವು ಸನ್ನಿಹಿತವಾಗಲು, ಹೆಚ್ಚು ವಿಳಂಬವಾಗದು" ಎಂದು ಫ್ರಾನ್ಸನ್ನು ಹರಸಿರುವರು. ಬ್ರಿಟಿಷ್ ಪ್ರಧಾನರ ಈ ಆಶೋತ್ತರಗಳಲ್ಲಿ ಫ್ರೆಂಚರು ಮಾತ್ರವೇ ಭಾಗಿಗಳಾಗುವುದಲ್ಲ; ಹಿಂಸೆಗೆ ಗುರಿಯಾಗಿ, ಇತರರಿಂದ ತುಳಿಯಲ್ಪಟ್ಟು ಕೊನೆಗೆ ತಮ್ಮ ಸ್ವಾತಂತ್ರ್ಯದ ಕಾದಾಟದಲ್ಲಿ, ಫ್ರಾನ್ಸಿನಿಂದ ಪ್ರೇರೇಪಣೆಯನ್ನೂ, ನವ ಚೈತನ್ಯವನ್ನೂ ಪಡೆದ ಮಿಲ್ಯಗಟ್ಟಲೆಯ ಜಗತ್ತಿನ ಇತರ ಜನಗಳೂ ಇದೇ ಭಾವನೆಯಲ್ಲಿ ಭಾಗಿಗಳಾಗುವರೆನ್ನುವುದು ನಿಸ್ಸಂದೇಹ.



ಡಾಕ್ಟರರು ಚರ್ಮದ ಆರೋಗ್ಯಕ್ಕೆ

ರೆಕ್ಸೋನವು ಒಳ್ಳೆಯದೆನ್ನುತ್ತಾರೆ.

ಉರಿಯನ್ನೂ ನೋವನ್ನೂ ಕಡಿಮೆಮಾಡಿ ಪೈ ನಿರ್ಮಲಮಾಡುವ ಅತ್ಯುತ್ತಮ ಗುಣಗಳಿಗಾಗಿ ರೆಕ್ಸೋನವನ್ನು ಪ್ರಸಿದ್ಧ ಡಾಕ್ಟರರು ಬಹಳ ಪ್ರೋತ್ಸಾಹಿಸುತ್ತಾರೆ. ರೆಕ್ಸೋನದಲ್ಲಿ ವಿಶೇಷರೀತಿಯಿಂದ ಸೇರಿಸಿವ ಆರೋಗ್ಯ ರಕ್ಷಣೆಯ ವಸ್ತುಗಳ ಮಿಶ್ರಣವಿರುವುದು. ಅದು ಕ್ರಿಮಿನಾಶಕವಾಗಿದೆ. ಅಂಟುರೋಗಗಳಿಂದ ರಕ್ಷಿಸಿ ಚರ್ಮವನ್ನು ಕಾಪಾಡುತ್ತದೆ.

ರೆಕ್ಸೋನದ ದ್ವಿವಿಧಕಾರ್ಯವು ಅತ್ಯುತ್ತಮ ವ್ಯಯೋಜನಗಳನ್ನು ಕೊಡುವುದು:

(೧) ಅದು ಕೊಳೆ ಮತ್ತು ಕ್ರಿಮಿಗಳಿಂದ ಅಂಟು ರೋಗಗಳು ಬಾರದಂತೆ ತಡೆಗಟ್ಟುತ್ತದೆ. ಅದರ ನಯವಾದ ಕ್ರಿಮಿನಾಶಕ ನೊರೆಯು ಚರ್ಮದೊಳ ಭಾಗವನ್ನೂ ಶುದ್ಧಮಾಡಿ, ಕ್ರಿಮಿಗಳ ಅಪಾಯದಿಂದ ಕಾಪಾಡುತ್ತದೆ.
(೨) ರೆಕ್ಸೋನದಲ್ಲಿರುವ ಪೋಷಕ ದ್ರವ್ಯಗಳು ಚರ್ಮಕ್ಕೆ ಪೋಷಣೆಕೊಟ್ಟು, ಅದು ನಿರ್ಮಲವಾಗಿಯೂ, ಕಾಂತಿ ಮತ್ತು ಚೈತನ್ಯವುಳ್ಳದ್ದಾಗಿಯೂ ಇರುವಂತೆ ಮಾಡುತ್ತವೆ.

ರೆಕ್ಸೋನದಲ್ಲಿ ಚರ್ಮಕ್ಕೆ ಆರೋಗ್ಯವನ್ನುಂಟುಮಾಡಿ ಕಾಪಾಡುವ ಅತ್ಯವಶ್ಯಕ ದ್ರವ್ಯಗಳ ಗುಪ್ತ ಮಿಶ್ರಣದಿಂದಾದ ಕೇಡಿಲ್ ಎಂಬ ಉರಿ ಮತ್ತು ನೋವನ್ನು ಏರಿಹರಿಸುವ ನೂತನ ಪದಾರ್ಥವಿದೆ.

ಮಕ್ಕಳಿಗೆ

ರೆಕ್ಸೋನದ ರಕ್ಷಣೆಯು ಅಗತ್ಯ. ನಿತ್ಯವೂ ಅದರಿಂದ ಮೈತೊಳೆಕೊಂಡರೆ ಕೊಳೆ ಮತ್ತು ರೋಗದ ಸೋಂಕು ತಗಲುವುದಿಲ್ಲ. ರೆಕ್ಸೋನಾ ಆಯಿಂಟ್‌ಮೆಂಟು ಚರ್ಮವ್ಯಾಧಿಗಳನ್ನು ಕೂಡಲೇ ಉಪಶಮನವಾಡಿ, ಅದನ್ನು ಮೊದಲಿನ ಆರೋಗ್ಯ ಸ್ಥಿತಿಗೆ ತರುತ್ತದೆ.

Rexona

ರೆಕ್ಸೋನ ಆಯಿಂಟ್‌ಮೆಂಟಿನಲ್ಲಿರುವ ಆಶ್ಚರ್ಯಕರವಾದ ಉರಿ ಮತ್ತು ನೋವನ್ನು ಉಪಶಮನ ಮಾಡುವ ಗುಣಗಳು ಹುಣ್ಣು, ಬೊಕ್ಕೆ, ಬೆವರುಸಾಲೆ, ಕಜ್ಜಿ ಮುಂತಾದ ಚರ್ಮರೋಗಗಳನ್ನು ವಾಸಿಮಾಡಿ, ಚರ್ಮವನ್ನು ಸ್ವಚ್ಛವಾಗಿಯೂ ಆರೋಗ್ಯಕರವಾಗಿಯೂ ಇರುಸುತ್ತವೆ.

REXONA PROPRIETARY LIMITED

RP. 9-92 KN

ಪಾರ್ಶ್ವಗುಚ್ಛ

ಹಿಂದೂದೇಶದಲ್ಲಿ ಪತ್ರಿಕೆಗಳಿಗೆ ಅಗತ್ಯವಿರುವ ಕಾಗದದ ಅಭಾವ ಹೆಚ್ಚುತ್ತ ಬರುತ್ತಿದೆ. ಕೆನಡದಿಂದ ಇತ್ತ ಬರುತ್ತಿರುವ ಕಾಗದದ ಸರಬರಾಯಿ ವಿಳಂಬವಾಗುತ್ತಿದೆ. ಆದುದರಿಂದ 'ಸ್ಟೇಟ್ಸ್‌ಮನ್'ನಂತಹ ಪ್ರಮುಖ ದೈನಿಕ ಪತ್ರಿಕೆಗಳು ತಮ್ಮ ಪುಟ ಸಂಖ್ಯೆಯನ್ನು ಕಡಿಮೆ ಮಾಡುವ ಯೋಜನೆ ಮಾಡಿವೆ.

ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್‌ಗಳ ಮೇರೆಗೆ ಮಧ್ಯಪ್ರಾಂತದ ನ್ಯಾಯವಿಧಾಯಕ ಸಭೆಯ ಸದಸ್ಯರಾದ ಶ್ರೀ. ಬಿಹಾರಿಲಾಲ್ ರನ್ನು ಕೈದುಮಾಡಲಾಗಿದೆ

ಆಂಧ್ರ ದೇಶದ ಕೆಲವು ಕಡೆಗಳಲ್ಲಿ ಮನೆ ಜಡ್ತಿಗಳೂ, ದಸ್ತಗಿರಿಗಳೂ ನಡೆಯುತ್ತಿವೆ. ರಾಜಮಹೇಂದ್ರಿಯೆಲ್ಲಿ ಕೆಲವು ಮಂದಿಯ ಮನೆಗಳನ್ನೂ, ಪತ್ರಿಕಾ ಕಾರ್ಯಾಲಯಗಳನ್ನೂ ಪೋಲೀಸರು ಜಡ್ತಿ ನಡೆಸಿ ಅಲ್ಲಿಯೂ, ಭೀಮಾವರದಲ್ಲಿಯೂ, ಎಲ್ಲೂರಲ್ಲಿಯೂ ಕೆಲಕೆಲವು ಕೈದುಗಳನ್ನು ಮಾಡಿರುತ್ತಾರೆ.

ಸಿಂಧ್ ಸರಕಾರವು ಕರಾಚಿಯ ಒಂದು ಸ್ಥಳೀಯ ಮುಸ್ಲಿಂ ದೈನಿಕವಾದ "ಇಸ್ಲಾ" ಪತ್ರಿಕೆಯಿಂದ "ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್"ಗಳ ಮೇರೆಗೆ ೩ ಸಾವಿರ ರೂಪಾಯಿಗಳ ಭದ್ರತೆಯನ್ನು ಕೇಳಿದೆ.

ಕಲ್ಕತ್ತೆಯ ಹಾಲ್ವೆಲ್ ಸ್ಮಾರಕವನ್ನು ಅಲ್ಲಿಂದ ತೆಗೆಯಲು ತನ್ಮ ಆಕ್ಷೇಪವಿಲ್ಲ. ಆದರೆ ಸತ್ಯಾಗ್ರಹ ನಡೆಯುವಷ್ಟು ಕಾಲ ಈ ವಿಷಯದಲ್ಲಿ ಯಾವ ತೀರ್ಮಾನವನ್ನೂ ಮಾಡಲಾರೆವು ಎಂದು ಬಂಗಾಳದ ಮಂತ್ರಿಮಂಡಲ ಅಭಿಪ್ರಾಯ ಪಟ್ಟಿರುವುದಾಗಿ ವಾರ್ತೆ.

ಬೆಜ್ವಾಡದ ಪೋಸ್ಟಾಫೀಸಿಗೆ, ಒಬ್ಬ ಬ್ಯಾಂಕರು ೪೧೦೦ ರೂಪಾಯಿಗಳ ಬೆಲೆಬಾಳುವ ಒಂದು ಕವರನ್ನು ಇನ್ಶೂರ್ ಮಾಡಲು ಕಳುಹಿಸಿದಾಗ, ಆ ಆಳು ಸ್ಟಾಂಪುಗಳನ್ನು ಕೊಂಡು ಹಚ್ಚುವುದರಲ್ಲಿದ್ದಾಗ ಆ ಕವರನ್ನು ಯಾರೋ ಜಾರಿಸಿಕೊಂಡು ನಡೆದಿದ್ದಾರೆ ಪತ್ತೆ ನಡೆಯುತ್ತಿದೆ!